Digitization by eGangotri and Sarayu Trust. Funding by MoE-IKS

ಮೈಸೂರು ವಿಶ್ವವಿದ್ಯಾನಿಲಯ
ಪ್ರಚಾರ ಪುಸ್ತಕಮಾಲೆ—೮೬

ಸಂಚಿಯ ಹೊನ್ನಮ್ಮ

ಎಚ್. ಎಂ. ಶಂಕರನಾರಾಯಣರಾವ್, ಎಂ.ಎ.,

C. No
033,1:9,1
J9

DONATED BY
M. S. SIDDAPPA BROTHERS,
Merchants, Manufacturers & Bankers,
THYAGARAJA ROAD, MYSORE-4.
TO
SHREE JANGAMAWADI MATH
BENARES

ಮೈಸೂರು
ಮೈಸೂರು ವಿಶ್ವವಿದ್ಯಾನಿಲಯ
೧೯೫೯

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ಮೈಸೂರು ವಿಶ್ವವಿದ್ಯಾನಿಲಯ
ಪ್ರಚಾರ ಪುಸ್ತಕಮಾಲೆ

೧. ಖಗೋಳಶಾಸ್ತ್ರ ಪ್ರವೇಶ
—ಡಾ|| ಸಿ. ಎನ್. ಶ್ರೀನಿವಾಸ ಅಯ್ಯಂಗಾರ್
೨. ಸಮಾಜದ ರೋಗರುಜಿನಗಳು—ಜಿ. ಹನುಮಂತರಾವ್
೩. ತೆರಿಗೆ—ಬಿ. ಆರ್. ಸುಬ್ಬರಾವ್
೪. ನವರತ್ನಗಳು—ಎಚ್. ಸುಬ್ಬಾಜೋಯಿಸ್
೫. ನಮ್ಮ ಹಳ್ಳಿಗಳು—ಜಿ. ಎನ್. ಕೃಷ್ಣಮೂರ್ತಿ

033,1:g,1 4585
J9
Rao, Shankarnarayan
Sanchiyahonnamma

ಣ
ರಸಿಂಹಾಚಾರ್
ಪ್ಪ
ಕೃಷ್ಣಸ್ವಾಮಿರಾವ್
ವ್
ರಾಯಣಶಾಸ್ತ್ರೀ
ಪಾಲಸ್ವಾಮಿ
ಂಗಾರ್
ಮಯ್ಯ
ಮಚಂದ್ರರಾವ್
ಸಿ. ಜಿ. ಸತ್ಯಗಿರಿನಾಥನ್
ಮಣ್ಣ
. ಗೋಪಾಲ್
ೀ
. ಎಚ್. ಕೃಷ್ಣ

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ಪ್ರಚಾರ ಪುಸ್ತಕಮಾಲೆ—೮೬

ಸಂಚಿಯ ಹೊನ್ನಮ್ಮ

Sanchiya honnamma

ಎಚ್. ಎಂ. ಶಂಕರನಾರಾಯಣರಾವ್, ಎಂ.ಎ.,

Shankaranarayan Rao

DONATED BY
M. S. SIDDAPPA BROTHERS
Merchants, Manufacturers & Bankers,
THYAGARAJA ROAD, MYSORE-4.
SHREE ... MUTT

ಮೈಸೂರು
ಮೈಸೂರು ವಿಶ್ವವಿದ್ಯಾನಿಲಯ
೧೯೫೯

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ಮೊದಲನೆಯ ಮುದ್ರಣ ೧೯೫೯
೩೦೦೦ ಪ್ರತಿಗಳು

033,1:9,1
J9

ಬೆಲೆ
ಸಾದಾ ಪ್ರತಿ ೨೫ ನಯೆ ಪೈಸೆ
ಉತ್ತಮ ಪ್ರತಿ ೩೭ ನಯೆ ಪೈಸೆ

SRI JAGADGURU VISHWARADHYA
JNANA SIMHASAN JNANAMANDIR
LIBRARY.
Jangamwadi Math, VARANASI.
Acc. No. 1668.......
4585

ಮುದ್ರಕರು :
ಮೈಸೂರು ಯೂನಿವರ್ಸಿಟಿ ಮುದ್ರಣಾಲಯ,
ವಿ. ವಿ. ಮೊಹಲ್ಲ, ಮೈಸೂರು

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ಮುನ್ನುಡಿ

ಈ ಪ್ರಚಾರ ಪುಸ್ತಕಮಾಲೆ ಪ್ರಾರಂಭವಾಗಿ ಇಂದಿಗೆ ಸುಮಾರು ಇಪ್ಪತ್ತೈದು ವರ್ಷಗಳಾಗಿವೆ. ಈ ಅವಧಿಯಲ್ಲಿ ೮೬ ಪುಸ್ತಿಕೆಗಳು ಈ ಮಾಲೆಯಲ್ಲಿ ಪ್ರಕಟವಾಗಿವೆ. ಕಾಲಾವಧಿ ಯನ್ನು ಗಮನಿಸಿದರೆ ಈಗ ಹೊರಬಿದ್ದಿರುವ ಕಿರುಹೊತ್ತಗೆಗಳ ಸಂಖ್ಯೆ ಈಗಿರುವುದಕ್ಕಿಂತಲೂ ದ್ವಿಗುಣವೊ ತ್ರಿಗುಣವೊ ಆಗಿರ ಬೇಕಾಗಿತ್ತೆಂದು ಹೇಳಬಹುದು. ಆದರೂ ಅವುಗಳ ಗುಣವನ್ನೂ ಅವು ಮಾರಾಟವಾಗುತ್ತಿರುವ ವೇಗವನ್ನೂ ಗಮನಿಸಿದರೆ ಈ ಮಾಲೆಯ ಉಪಯುಕ್ತತೆ ಮತ್ತು ಜನಪ್ರಿಯತೆ ವ್ಯಕ್ತವಾಗು ತ್ತದೆ. ಸಾಮಾನ್ಯವಾಗಿ ಪ್ರತಿಯೊಂದು ಪುಸ್ತಿಕೆಯೂ ಮೂರು ನಾಲ್ಕು ಸಾರಿ ಮುದ್ರಿತವಾಗಿದೆ. ದಿನೇ ದಿನೇ ಈ ಮಾಲೆಯ ಬಗೆಗೆ ಜನರ ವಿಶ್ವಾಸಾದರಗಳು ಅಧಿಕವಾಗುತ್ತಿವೆ. ".ಈ ತಿಂಗಳು ಏನಾದರೂ ಹೊಸ ಪುಸ್ತಿಕೆ ಬಂದಿದೆಯೆ? ಮುಗಿದು ಹೋಗಿರುವ ಪುಸ್ತಿಕೆಗಳು ಅಚ್ಚಾಗಿವೆಯೆ?" ಎಂದು ಮೇಲಿಂದ ಮೇಲೆ ಜನ ಕೇಳುತ್ತಿರುತ್ತಾರೆ. ಇದು ನಿಜವಾಗಿಯೂ ಸಂತೋ ಷದ ಸಂಗತಿ; ನಾಡಿನ ಪ್ರಗತಿಯ ಒಂದು ಚಿಹ್ನೆ.

ನಾಡಿನಲ್ಲಿ ದಿನೇ ದಿನೇ ವಿದ್ಯಾವಂತರ ಮತ್ತು ಅಕ್ಷರಸ್ಥರ ಸಂಖ್ಯೆ ಬೆಳೆಯುತ್ತಿದೆ. ಕೇವಲ ಸಾಕ್ಷರತೆಯಿಂದ ಮಹತ್ತಾದ ಪ್ರಯೋಜನವೇನೂ ಲಭಿಸದು. ಸಾಕ್ಷರತೆ ಬೇರೊಂದು ಸಿದ್ಧಿ ಗಾಗಿ ಸಾಧನವೇ ಹೊರತು ಅದೇ ಪರಮ ಗುರಿಯಲ್ಲ; ಜ್ಞಾನ ಸಂಪಾದನೆಯೇ ಅದರ ಪರಮ ಗುರಿ. ಈ ಗುರಿಯ ಸಾಧನೆ ಗಾಗಿ ಸಕಲ ಅನುಕೂಲತೆಗಳನ್ನು ಕಲ್ಪಿಸುವುದು ವಿಶ್ವವಿದ್ಯಾ ನಿಲಯದಂಥ ಸಂಸ್ಥೆಗಳ ಆದ್ಯಕರ್ತವ್ಯ. ಈ ಮೂಲಕ ವಿಶ್ವ

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ವಿದ್ಯಾನಿಲಯದ ಜ್ಞಾನವಾಹಿನಿ ನಾಡಿನ ಮೂಲೆಮೂಲೆಗೆಲ್ಲ ಹರಿದು, ಸಮಷ್ಟಿಪ್ರಜ್ಞೆ ವಿಕಾಸಗೊಳ್ಳಲನುಕೂಲವಾಗುತ್ತದೆ.

ಈ ಮಾಲೆಯಿಂದ ಸಾಮಾನ್ಯ ಜನರಲ್ಲಿ ಜ್ಞಾನಪ್ರಸಾರ ಕಾರ್ಯ ತಕ್ಕಮಟ್ಟಿಗೆ ಯಶಸ್ವಿಯಾಗಿ ನಡೆದಿರುವಂತೆಯೆ ಕನ್ನಡದಲ್ಲಿ ವಿಜ್ಞಾನ ಸಂಬಂಧವಾದ ವಿಷಯುಗಳನ್ನು ಸುಲಭವಾಗಿ ಸರಳವಾಗಿ ಹೇಳಬಹುದು, ಮತ್ತು ಕನ್ನಡ ವೈಜ್ಞಾನಿಕ ಭಾಷೆಯಾಗಬಲ್ಲುದು ಎಂಬ ಅಂಶ ಸ್ಪಷ್ಟವಾಗಿ ವ್ಯಕ್ತವಾಗುತ್ತದೆ. ಈ ಪುಸ್ತಿಕೆಗಳ ಪಟ್ಟಿಯನ್ನೊಮ್ಮೆ ಓದಿದರೆ ಸಂದೇಹವಾದಿಗಳ ಶಂಕೆ ಸಂಪೂರ್ಣವಾಗಿ ನಿವಾರಣೆಗೊಂಡು ಧೈರ್ಯ ಮೂಡದಿರದು. ಇವುಗಳಲ್ಲಿ ೫೫ ಪುಸ್ತಿಕೆಗಳು ಭೌತವಿಜ್ಞಾನ, ರಸಾಯನ ವಿಜ್ಞಾನ, ಪ್ರಾಣಿ ವಿಜ್ಞಾನ, ಸಮಾಜ ವಿಜ್ಞಾನ, ವೈದ್ಯ ವಿಜ್ಞಾನ, ಗಣಿತ ವಿಜ್ಞಾನ, ಇತಿಹಾಸ ಮೊದಲಾದುವುಗಳಿಗೆ ಸಂಬಂಧಿಸಿದವು. ಉಳಿದ ೨೪ ಪುಸ್ತಿಕೆಗಳು ಸಾಹಿತ್ಯ ಮತ್ತು ಸಾಹಿತ್ಯ ವಿಮರ್ಶೆಗೆ ಸಂಬಂಧಿಸಿದುವು. ಇವುಗಳ ಗ್ರಂಥಕರ್ತರು ಪ್ರಮುಖವಾಗಿ ವಿಶ್ವವಿದ್ಯಾನಿಲಯದಲ್ಲಿ ಹತ್ತಿಪ್ಪತ್ತು ವರ್ಷಗಳ ಕಾಲ ಪಾಠ ಹೇಳಿ ನುರಿತಿರುವ ಘನ ವಿದ್ವಾಂಸರು. ಬಹಳ ಹಿಂದೆಯೇ ವೈಜ್ಞಾನಿಕ ಗ್ರಂಥಗಳ ರಚನೆಗೆ ಕೈಹಾಕಿ ಕನ್ನಡ ವೈಜ್ಞಾನಿಕ ಭಾಷೆಯಾಗುವ ಸಾಮರ್ಥ್ಯವನ್ನು ಪಡೆದಿದೆ, ವಿಶ್ವವಿದ್ಯಾನಿಲಯದಲ್ಲಿ ಶಿಕ್ಷಣಮಾಧ್ಯಮವಾಗುವ ಶಕ್ತಿಯನ್ನು ಪಡೆದಿದೆ ಎಂದು ತೋರಿಸಿಕೊಟ್ಟಿದ್ದಾರೆ. ಅವರೆಲ್ಲ ಅಭಿನಂದನಾರ್ಹರು.

ಈ ಮಾಲೆಯ ಕಾರ್ಯ ತ್ವರಿತಗೊಂಡು, ವಿಸ್ತಾರಗೊಂಡು ಪುಸ್ತಕಗಳ ಸಂಖ್ಯೆ ದಿನೇ ದಿನೇ ಬೆಳೆಯಬೇಕೆಂದೂ, ಇದರಿಂದ ಸಾಮಾನ್ಯ ಜನತೆ ಸಂಪೂರ್ಣ ಪ್ರಯೋಜನ ಪಡೆದು ಸಮಷ್ಟಿ

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ಪ್ರಜ್ಞೆ ಸರ್ವತೋಮುಖವಾಗಿ ವಿಕಾಸಗೊಳ್ಳಬೇಕೆಂಬುದೂ ವಿಶ್ವವಿದ್ಯಾನಿಲಯದ ಆಸೆ. ಕನ್ನಡನಾಡು ಒಂದುಗೂಡಿರುವ ಈ ಶಕಮುಹೂರ್ತದಲ್ಲಿ ಕನ್ನಡನುಡಿ ಆಡಳಿತದ ಭಾಷೆಯಾಗಿ, ವ್ಯವಹಾರದ ಭಾಷೆಯಾಗಿ, ಶಿಕ್ಷಣದ ಭಾಷೆಯಾಗಿ, ಜನತೆಯ ಸಂಸ್ಕೃತಿವಿಕಾಸಸಾಧನದ ಭಾಷೆಯಾಗಿ ಮುಂದುವರಿಯು ವುದರಲ್ಲಿ ಸಂದೇಹವಿಲ್ಲ. ವಿಶ್ವವಿದ್ಯಾನಿಲಯದ ಈ ಸೇವೆ ಯನ್ನು ಕರ್ನಾಟಕ ಸಂಪೂರ್ಣವಾಗಿ ತನ್ನ ಮೇಲ್ಮೆಗೂ ಏಳ್ಗೆಗೂ ಬಳಸಿಕೊಳ್ಳುತ್ತದೆಂದು ನಾವು ಹಾರೈಸುತ್ತೇವೆ.

ಮೈಸೂರು
೫—೧—೫೯

ಕೆ. ವಿ. ಪುಟ್ಟಪ್ಪ
ವೈಸ್-ಛಾನ್ಸಲರ್.

DONATED BY
M. S. SIDDAPPA BROTHERS
Merchants, Manufacrurers & Bankers,
THYAGARAJA ROAD, MYSORE-4.
TO
SHREE JANGAMAVADI MUTT
BENARES CITY

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ಅರಿಕೆ

ಮೈಸೂರು ದೊರೆಗಳಾದ ಚಿಕ್ಕದೇವರಾಯ ಒಡೆಯರ ಆಸ್ಥಾನದಲ್ಲಿ ಸಂಚಿಯ ಕೆಲಸದಲ್ಲಿದ್ದು, ಅರಸರ ಸಾಹಿತ್ಯೋಜ್ಜೀವನದ ಕಾರ್ಯದಲ್ಲಿ ಭಾಗವಹಿಸಿ, ಧರ್ಮದ ನೆಲಗಟ್ಟಿನ ಮೇಲೆ ಹೆಣ್ಣು ಮಕ್ಕಳ ಶೀಲವನ್ನು ಬೆಳಸಿ, ಬಾಳನ್ನು ಚೆಲುವುಗೊಳಿಸಲು ಸಹಕಾರಿಯಾಗುವಂತೆ 'ಹದಿಬದೆಯ ಧರ್ಮ'ವೆಂಬ ಕಾವ್ಯವನ್ನು ರಚಿಸಿದ ಹೊನ್ನಮ್ಮನ ವಿಷಯವಾಗಿ ಕೆಲವು ಮಾತುಗಳನ್ನು ಹೇಳಲು ಈ ಚಿಕ್ಕ ಪುಸ್ತಕದಲ್ಲಿ ಯತ್ನಿಸಿದೆ. ಇದರಲ್ಲಿರುವ ದೋಷಗಳನ್ನು ಬಲ್ಲವರು ಮನ್ನಿಸಬೇಕು; ಗುಣಗಳನ್ನು ಮಾತ್ರ ಗ್ರಹಿಸಬೇಕು.

ಈ ಗ್ರಂಥವನ್ನು ಬರೆಯಲು ನನ್ನನ್ನು ಪ್ರೋತ್ಸಾಹಿಸಿದ ಪ್ರಕಟನಶಾಖಾಧಿಕಾರಿಗಳಾದ ಮಿತ್ರ ಶ್ರೀ ತ. ಸು. ಶಾಮರಾಯರಿಗೂ, ಗ್ರಂಥವನ್ನು ಅಚ್ಚಿಟ್ಟ ಮೈಸೂರು ವಿಶ್ವವಿದ್ಯಾನಿಲಯಕ್ಕೂ, ಅತ್ಯಲ್ಪಕಾಲದಲ್ಲಿ ಗ್ರಂಥವನ್ನು ಸುಂದರವಾಗಿ ದಕ್ಷತೆಯಿಂದ ಅಚ್ಚಿಟ್ಟ, ವಿಶ್ವವಿದ್ಯಾನಿಲಯದ ಅಚ್ಚುಕೂಟದ ಮುಖ್ಯಾಧಿಕಾರಿಗಳಾದ ಮಿತ್ರ ಶ್ರೀ ದೇ. ಜವರೇಗೌಡರಿಗೂ ಮತ್ತು ಅವರ ಅಧಿಕಾರವರ್ಗಕ್ಕೂ ನನ್ನ ಕೃತಜ್ಞತೆ ಸಲ್ಲುತ್ತದೆ.

ಶಾರದಾಮಂದಿರ
ರಾಮಯ್ಯರ್ ರಸ್ತೆ
ಮೈಸೂರು
೨೨—೪—೫೯

ಎಚ್. ಎಂ. ಶಂಕರನಾರಾಯಣರಾವ್

CC0. In Public Domain. Jangamwadi Math Collection, Varanasi

Digitization by eGangotri and Sarayu Trust..Funding by MoE-IKS

ವಿಷಯಾನುಕ್ರಮಣಿಕೆ

೧. ಪೀಠಿಕೆ ೧
೨. ಕವಿ, ಕಾವ್ಯದ ಹುಟ್ಟು ೫
೩. ಹದಿಬದೆಯ ಧರ್ಮ ೯
೪. ವಿಮರ್ಶೆ ೨೪
೫. ಮುಕ್ತಾಯ ೪೭

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ಸಂಚಿಯ ಹೊನ್ನಮ್ಮ

೧. ಪೀಠಿಕೆ

ಕವಿತೆ, ಹೆಣ್ಣು, ಬಳ್ಳಿ ಇವು ಆಶ್ರಯವಿಲ್ಲದೆ ಶೋಭಿಸವು ಎಂಬ ಮಾತು ಯಥೋಚಿತವಾಗಿ ಕನ್ನಡ ಸಾಹಿತ್ಯಕ್ಕೂ ಅನ್ವಯಿಸುತ್ತದೆ. ಏಕೆಂದರೆ ಕನ್ನಡ ಸಾಹಿತ್ಯ ಆರಂಭಕಾಲ ದಿಂದಲೂ ಸ್ವಲ್ಪ ಹೆಚ್ಚು ಕಡಿಮೆ ರಾಜಾಶ್ರಯದಲ್ಲಿಯೇ ಬೆಳೆದು ಬಂದಿದೆ. ಎಷ್ಟೋ ಜನ ರಾಜರೇ ಕನ್ನಡನುಡಿಯಲ್ಲಿ ಕಾವ್ಯ ರಚನೆ ಮಾಡಿ ಇತರರಿಗೆ ಮಾರ್ಗದರ್ಶಕರಾಗಿದ್ದಾರೆ. ರಾಷ್ಟ್ರ ಕೂಟ, ಚಾಳುಕ್ಯ, ಗಂಗ, ಹೊಯಿಸಳ, ವಿಜಯನಗರದ ಅರಸರೂ, ಇವರ ಪ್ರಧಾನಿ ದಂಡನಾಯಕರಲ್ಲಿ ಅನೇಕರೂ ಹಾಗೂ ಮತ್ತಿತರರೂ ಕವಿಜನಾಶ್ರಯರಾಗಿ ಕೀರ್ತಿಪಡೆದಿ ದ್ದಾರೆ. ಈ ಕನ್ನಡ ಸಾಹಿತ್ಯೋತ್ಸವದಲ್ಲಿ ಮೈಸೂರು ರಾಜರ ಪಾತ್ರ ಮಿಕ್ಕಾವ ವಂಶದ ರಾಜರ ಪಾತ್ರಕ್ಕೆ ಯಾವ ವಿಧದಲ್ಲಿಯೂ ಕಡಿಮೆಯಾದುದಲ್ಲ.

ಕನ್ನಡ ಸಾಹಿತ್ಯಕ್ಕೆ ಅತಿಶಯವಾಗಿ ಪ್ರೋತ್ಸಾಹಕೊಟ್ಟು, ಅದರ ಪುನರುಜ್ಜೀವನದ ಕಾರ್ಯದಲ್ಲಿ ವಿಶೇಷವಾಗಿ ಶ್ರಮಿಸಿದ ಮೈಸೂರು ಅರಸರಲ್ಲಿ ಚಿಕ್ಕದೇವರಾಯ ಒಡೆಯರಿಗೆ ಅಗ್ರಸ್ಥಾನ ಸಲ್ಲುತ್ತದೆ. ರಕ್ಕಸತಂಗಡಿ ಯುದ್ಧದಲ್ಲಿ ವಿಜಯನಗರದ ಸಾಮ್ರಾಜ್ಯ ಪತನವಾದ ಮೇಲೆ, ಹಿಂದೂ ಧರ್ಮವನ್ನು ರಕ್ಷಣೆ ಮಾಡುವ, ಸಾಹಿತ್ಯ ಮತ್ತು ಇತರ ಕುಶಲಕಲೆಗಳಿಗೆ ಪ್ರೋತ್ಸಾಹ ಕೊಡುವ ಹೊಣೆ ಮೈಸೂರು ದೊರೆಗಳ ಮೇಲೆ ಬಿದ್ದಿತು. ೧೬೭೨ ರಿಂದ ೧೭೦೪ರ ವರೆಗೆ ಶ್ರೀರಂಗಪಟ್ಟಣದಲ್ಲಿ

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ಮೈಸೂರು ರಾಜ್ಯವನ್ನು ಆಳಿದ ಚಿಕ್ಕದೇವರಾಯರ ಆಳ್ವಿಕೆಯನ್ನು ಮೈಸೂರಿನ ಇತಿಹಾಸದಲ್ಲಿ ಒಂದು ಪರ್ವಕಾಲವೆಂದು ಕರೆಯಬಹುದು. ಏಕೆಂದರೆ ಅವರು ಮೈಸೂರಿನ ಸಿಂಹಾಸನವನ್ನು ಏರಿದಾಗ ಸುತ್ತಲೂ ಹಗೆಗಳು ಪ್ರಬಲರಾಗಿದ್ದರು. ಮರಾಠರು, ಮುಸಲ್ಮಾನರು ಮತ್ತು ಇತರ ಸಣ್ಣ ದೊಡ್ಡ ಪಾಳೆಯಗಾರರು ಮೈಸೂರು ರಾಜ್ಯವನ್ನು ಕಬಳಿಸಲು ಉತ್ಸುಕರಾಗಿದ್ದರು. ಆದರೂ ದೊರೆಗಳು ಧೈರ್ಯಗೆಡದೆ ಮರಾಠರ ದಾಳಿಯನ್ನು ತಡೆಗಟ್ಟಿದರು; ಮಧುರೆ, ತಂಜಾವೂರಿನ ಪಾಳೆಯಗಾರರನ್ನು ಕೂಡಿಬಂದ ಬಿಜಾಪುರದ ಸುಲ್ತಾನನನ್ನು ಸೋಲಿಸಿದರು; ಅನೇಕ ಪುಂಡಪಾಳೆಯಗಾರರನ್ನು ಸದೆಬಡೆದು ರಾಜ್ಯವನ್ನು ವಿಸ್ತರಿಸಿದರು; 'ಇಂದ್ರ ಮಳೆ ಕರೆಯುತ್ತಾನೆ, ಬಸವಣ್ಣ ಹೊಲ ಉಳುತ್ತಾನೆ, ದೊರೆಗೇಕೆ ತೆರಿಗೆ ತೆರಬೇಕು' ಎಂದು ದಂಗೆಯೆದ್ದ ಪುಂಡಜಂಗಮರನ್ನು ಅಡಗಿಸಿದರು; ಮೊಗಲ ಸಾಮ್ರಾಟನ ಆಸ್ಥಾನಕ್ಕೆ ರಾಯಭಾರಿಗಳನ್ನು ಕಳುಹಿಸಿ ಔರಂಗಜೆಬನಿಂದ ಜಗದೇವರಾಯ ಎಂಬ ಬಿರುದನ್ನೂ, ದಂತದ ಸಿಂಹಾಸನದ ಮೇಲೆ ಕುಳಿತುಕೊಳ್ಳುವ ಹಕ್ಕನ್ನೂ ಸಂಪಾದಿಸಿದರು. ರಾಜ್ಯ ವಿಸ್ತರಣೆಯಲ್ಲಿ ಮಾತ್ರವಲ್ಲದೆ, ವಿಸ್ತರಿಸಿದ ರಾಜ್ಯವನ್ನು ಸುವ್ಯಸ್ಥಿತಗೊಳಿಸುವುದರಲ್ಲಿಯೂ ಈ ದೊರೆಯ ಸಾಮರ್ಥ್ಯ ಕಂಡುಬರುತ್ತದೆ. ಮೈಸೂರು ರಾಜ್ಯದಲ್ಲಿ ಮೊಟ್ಟಮೊದಲಬಾರಿಗೆ ಅಂಚೆಯನ್ನು ವ್ಯವಸ್ಥೆಗೊಳಿಸಿ ಆರ್ಥಿಕ ಸುಧಾರಣೆಗಳನ್ನು ತಂದು, ಮೊಗಲರ ಆಸ್ಥಾನದಲ್ಲಿ ತನ್ನ ರಾಯಭಾರಿಗಳು ಕಂಡು ತಿಳಿದುಬಂದ ಕ್ರಮದಲ್ಲಿ ಆಡಳಿತ ಕ್ರಮಗಳನ್ನು ಸರಿಗೊಳಿಸಿದ ಕೀರ್ತಿ ಚಿಕ್ಕದೇವರಾಯ ಒಡೆಯರಿಗೆ ಸಲ್ಲುತ್ತದೆ. ಪ್ರತಿದಿನವೂ ಎರಡುಚೀಲ ಪಗೋಡ (ನಾಣ್ಯ)

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ಗಳು ಕೋಶಕ್ಕೆ ಸೇರದ ಹೊರತು ಊಟಮಾಡದಿದ್ದುದು ಈ ದೊರೆಯ ಪದ್ಧತಿಯಾಗಿದ್ದಿತಂತೆ! ತಮ್ಮ ವಿಕ್ರಮದಿಂದ ರಾಜ್ಯವನ್ನೂ, ರಾಜನೀತಿ ಕೌಶಲದಿಂದ ಹಣವನ್ನೂ ಹೆಚ್ಚಿಸಿದ ದೊರೆಯನ್ನು ಕವಿಗಳು ಅಪ್ರತಿಮವೀರನೆಂದೂ, ನವಕೋಟಿ ನಾರಾಯಣನೆಂದೂ ಕರೆದುದರಲ್ಲಿ ಏನು ಆಶ್ಚರ್ಯ!

ಚಿಕ್ಕದೇವರಾಯ ಒಡೆಯರ ವಿಶಾಲವಾದ ಮನೋಧರ್ಮವೂ, ಔದಾರ್ಯವೂ ಅವರ ಜೀವನದ ಇತರ ರಂಗಗಳಲ್ಲಿಯೂ ವ್ಯಕ್ತವಾಗುತ್ತದೆ. ಚಿಕ್ಕಂದು ದೊರೆಗಳಿಗೆ ಜೈನಮತೀಯನೂ ಸುಸಮರ್ಥನೂ ಆದ ವಿಶಾಲಾಕ್ಷ ಪಂಡಿತನ ಸ್ನೇಹ ದೊರಕಿತು. ರಾಜರ ವಿದ್ಯಾಭ್ಯಾಸ ಅಳಸಿಂಗಾಚಾರ್ಯರ ಬಳಿ ನಡೆದು ಪ್ರಧಾನಿ ತಿರುಮಲಾರ್ಯನ ಮಿತ್ರತ್ವ ಉಂಟಾಯಿತು. ಇದರಿಂದ ದೊರೆಗೆ ಶ್ರೀ ವೈಷ್ಣವ ಮತದಲ್ಲಿ ಗಾಢವಾದ ಭಕ್ತಿಯೂ, ಜೈನ ಮತದಲ್ಲಿ ಅಭಿಮಾನವೂ, ಇತರ ಮತಗಳ ವಿಷಯದಲ್ಲಿ ಸಹಿಷ್ಣುತೆಯೂ ಬೆಳೆದು ಬಂದವು.

ಚಿಕ್ಕದೇವರಾಯ ಒಡೆಯರು ತಾವೇ ಕವಿಗಳಾಗಿದ್ದು ಕನ್ನಡದಲ್ಲಿ ಕೃತಿರಚನೆ ಮಾಡಿದುದಲ್ಲದೆ, ಅನೇಕಜನ ಕವಿಗಳಿಗೆ ತಮ್ಮ ಆಸ್ಥಾನದಲ್ಲಿ ಆಶ್ರಯವನ್ನು ಕೊಟ್ಟಿದ್ದರು. ಈ ವಿದ್ವತ್ಪ್ರಭು 'ಚಿಕದೇವರಾಜ ಬಿನ್ನಪ' 'ಗೀತ ಗೋಪಾಲ' 'ಭಾಗವತ' 'ಶೇಷಧರ್ಮ' 'ಭಾರತ'—ಈ ಗ್ರಂಥಗಳನ್ನು ರಚಿಸಿದ್ದಾನೆ. ತಿರುಮಲಾರ್ಯನೇ ಈ ಗ್ರಂಥಗಳ ಕರ್ತೃವೆಂದು ವಾದವಿದ್ದರೂ, ಇದರಿಂದ ದೊರೆಗಳಿಗೆ ಸಂಗೀತ ಸಾಹಿತ್ಯಗಳಲ್ಲಿದ್ದ ಪಕ್ಷಪಾತದ ವಿಷಯದಲ್ಲಿ ಯಾವ ಲೋಪವೂ ಕಂಡುಬರುವುದಿಲ್ಲ. 'ಇವನ ಪ್ರೋತ್ಸಾಹದಿಂದಲೇ ತಿರುಮಲಾರ್ಯ, ಸಿಂಗರಾರ್ಯ, ಚಿಕ್ಕುಪಾಧ್ಯಾಯ, ಶೃಂಗಾರಮ್ಮ, ಹೊನ್ನಮ್ಮ,

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ವೇಣುಗೋಪಾಲವರಪ್ರಸಾದ, ತಿಮ್ಮಕವಿ, ಮಲ್ಲಿಕಾರ್ಜುನ, ಚಿದಾನಂದ ಕವಿ, ಮಲ್ಲರಸ ಮುಂತಾದ ಕವಿಗಳು ಕನ್ನಡದಲ್ಲಿ ಉದ್ಗ್ರಂಥಗಳನ್ನು ಬರೆದು ಆ ಭಾಷೆಗೆ ಉನ್ನತಿಯನ್ನುಂಟು ಮಾಡಿದರು.' ನಿಜ. ಕನ್ನಡದಲ್ಲಿ ಮೊಟ್ಟಮೊದಲು ನಾಟಕ ಅವತರಿಸುವಂತಾದುದು ಈ ಅರಸರ ಕಾಲದಲ್ಲೇ. ಹೆಂಗಸರೂ ಕವಿಗಳೆನಿಸಬಹುದೆನಿಸುವ ರಾಜಶೇಖರನ ಉಕ್ತಿಗೆ ಪುಷ್ಟಿಕೊಡುವಂತೆ, ತಮ್ಮ ಆಸ್ಥಾನದ ಸ್ತ್ರೀಯರಲ್ಲಿ ಪ್ರತಿಭೆಯನ್ನು ಕಂಡುಕೊಂಡು ಅವರು ಸತ್ಕಾವ್ಯವನ್ನು ರಚಿಸುವಂತೆ ದೊರೆಗಳು ಪ್ರೋತ್ಸಾಹಿಸಿದರು. ದೊರೆಯ ಮಿತ್ರನೂ, ಮಂತ್ರಿಯೂ ಆದ ತಿರುಮಲಾರ್ಯನು 'ಅಪ್ರತಿಮ ವೀರ ಚರಿತೆ' ಯೆಂಬ ಅಲಂಕಾರಗ್ರಂಥದಲ್ಲಿ ತನ್ನ ಪೋಷಕನ ಬಲಪರಾಕ್ರಮಗಳನ್ನೂ, ದಿಗ್ವಿಜಯವನ್ನೂ ಬಾಯಿತುಂಬ ಹೊಗಳಿರುವುದಲ್ಲದೆ, 'ಚಿಕದೇವರಾಯ ವಿಜಯ'ವನ್ನು ಗದ್ಯದಲ್ಲಿ ಬರೆದು, ಅದರಲ್ಲಿ ಮೈಸೂರು ದೊರೆಗಳ ಚರಿತ್ರೆಯನ್ನು ನಿರೂಪಿಸಿ, ಹಿಂದುಳಿದಿದ್ದ ಗದ್ಯವನ್ನು ಮುಂದಾಗಿಸಿದನು. ಇವನ ತಮ್ಮನಾದ ಸಿಂಗರಾರ್ಯನು ಶ್ರೀಹರ್ಷನ ರಾತ್ನಾವಳಿಯ ನಾಟಿಕೆಯ ರೂಪಾಂತರವಾದ 'ಮಿತ್ರವಿಂದಾ ಗೋವಿಂದ' ಎಂಬ ನಾಟಕವನ್ನು ಬರೆದು ಕನ್ನಡದ ಮೊಟ್ಟಮೊದಲನೆಯ ನಾಟಕಕಾರನೆಂಬ ಬಿರುದಿಗೆ ಪಾತ್ರನಾದನು. ಚಿಕ್ಕದೇವರಾಜಒಡೆಯರ ಇನ್ನೊಬ್ಬ ಮಂತ್ರಿಯಾದ ಚಿಕ್ಕುಪಾಧ್ಯಾಯನು ಈಗ ನಮಗೆ ತಿಳಿದ ಮಟ್ಟಿಗೆ ಕಮಲಾಚಲ ಮಹಾತ್ಮ್ಯವೇ ಮೊದಲಾದ ಇಪ್ಪತ್ತೆಂಟು ಗ್ರಂಥಗಳನ್ನು ರಚಿಸಿದ್ದಾನೆ. ಈ ಗ್ರಂಥಗಳು ಗದ್ಯ ಪದ್ಯಾತ್ಮಕಗಳಾಗಿವೆ; ಛಂದೋ ವೈವಿಧ್ಯದಿಂದಲೂ ವಸ್ತು ವೈವಿಧ್ಯದಿಂದಲೂ ಕೂಡಿವೆ. ಹೆಚ್ಚೇನು ? ಕವಿಚರಿತೆಕಾರರು ಹೇಳು

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ವಂತೆ 'ಕನ್ನಡದಲ್ಲಿ ಈತನಷ್ಟು ಗ್ರಂಥಗಳನ್ನು ಮತ್ತಾವ ಕವಿಯೂ ಬರೆದಿಲ್ಲವೆಂದು ತೋರುತ್ತದೆ.' ಇಂಥ ಆವರಣ ದಲ್ಲಿದ್ದ ಹೊನ್ನಮ್ಮ ರಾಜನಿಂದಲೂ, ಆಸ್ಥಾನದ ಪಂಡಿತ ರಿಂದಲೂ ಪ್ರೋತ್ಸಾಹಿತಳಾಗಿ ನಿರ್ಮಳಸತೀಧರ್ಮದ ಕೈಪಿಡಿ ಯಾದ 'ಹದಿಬದೆಯ ಧರ್ಮ'ವನ್ನು ರಚಿಸಿದುದರಲ್ಲಿ ಏನು ಆಶ್ಚರ್ಯ ?

೨. ಕವಿ, ಕಾವ್ಯದ ಹುಟ್ಟು

ಹದಿಬದೆಯ ಧರ್ಮದಿಂದಾಗಲೀ ಇತರ ಕಡೆಗಳಿಂದಾಗಲೀ ಹೊನ್ನಮ್ಮನ ಬದುಕಿನ ವಿವರಗಳು ನಮಗೆ ತಿಳಿದುಬಾರವು. ಗ್ರಂಥದಿಂದ ಹೊರಪಡುವ ಕೆಲವು ವಿವರಗಳಿಂದಲೇ ಹೊನ್ನ ಮ್ಮನ ಮೂರ್ತಿ ಚಿತ್ರವನ್ನೂ, ಮನೋಧರ್ಮವನ್ನೂ ಚಿತ್ರಿಸಿ ಕೊಂಡು ಅಷ್ಟರಿಂದಲೇ ನಾವು ತೃಪ್ತರಾಗಬೇಕಾಗಿದೆ. 'ಆನಾವಳು ಎನ್ನ ಮುನ್ನಿರವಾವುದು' ಎಂಬ ಆಕೆಯ ಮಾತಿನಿಂದ ಹೊನ್ನಮ್ಮ ಚಿಕ್ಕಂದಿನಲ್ಲಿ ಅಷ್ಟೇನೂ ಸಿರಿವಂತ ಳಾಗಿರಲಿಲ್ಲವೆಂದು ತೋರುತ್ತದೆ. ಇವಳು ಹುಟ್ಟಿದೂರು ಯಳಂದೂರಾಗಿರಬಹುದು. ಚಿಕ್ಕದೇವರಾಯ ಒಡೆಯರ ಪಟ್ಟ ಮಹಿಷಿಯೂ, ಸಕಲ ಸದ್ಗುಣ ಸಂಪನ್ನೆಯೂ, ಅಕಲುಷೆಯೂ ಆದ ದೇವಮ್ಮನು ಶ್ರೀರಂಗಪಟ್ಟಣಕ್ಕೆ ಬಂದಾಗ ಆಕೆಯ ಊಳಿಗದವರಲ್ಲಿ ಹೊನ್ನಮ್ಮನೂ ಒಬ್ಬಳಾಗಿ ಬಂದಿರಬೇಕು. ಅಂದಿನಿಂದ ಹೊನ್ನಮ್ಮನ ಭಾಗ್ಯ ಮೇಲೇರತೊಡಗಿತು. ಪಟ್ಟಮಹಿಷಿಯ ಅಂತಃಪುರ ವಿದ್ಯೆಗೂ ಐಶ್ವರ್ಯಕ್ಕೂ ಆಶ್ರಯ ಸ್ಥಾನವಾಗಿತ್ತು. ಆ ವೈಭವವನ್ನು ಹೊನ್ನಮ್ಮನೇ ತನ್ನ ಮುದ್ದಾದ ಮಾತಿನಿಂದ ವರ್ಣಿಸಲಿ.

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ಚಿಕದೇವರಾಜಚಂದ್ರಮನ ಪಟ್ಟದ ರಾಣಿ
ಸಕಲ ಸದ್ಗುಣ ಸಂಪನ್ನೆ
ಅಕಲುಷೆಯೆಳವಂದೂರು ದೇವಮ್ಮನು
ಸಕಲ ಸಂಪದದೊಡನಿಹಳು.
ಪಾಡುವ ಕುಣಿವ ಬಾಜಿಪ ಬಣ್ಣನೆ ಪಾ
ತಾಡುವ ಪರಿಹಾಸಗೈವ
ಗಾಡಿಗಾತಿಯರು ಗಣನೆಯಿಲ್ಲದೆ ಜೋಡು
ಗೂಡಿರುವರು ಕೂರ್ಮೆಯೊಳು.
ನೋಂತು ಚತುಷ್ಷಷ್ಟಿ ಕಲೆಗಳು ಪೆಣ್ಬರಿ
ಜಾಂತು ಸೇರಿದವೋ ಎಂಬಂತೆ
ಸಂತಸ ಮಿಗೆ ಸರ್ವ ಸರಸವಿದ್ಯಾಸಿ
ದ್ಧಾಂತವೇದಿನಿಯರೊಪ್ಪಿಹರು.

ಈ ತುಂಬು ಆವರಣದ ನಡುವೆ ಸದ್ದುಗದ್ದಲವಿಲ್ಲದಿದ್ದ ಸೌಮ್ಯಮೂರ್ತಿ ಹೊನ್ನಮ್ಮ. 'ಭೂವನಿತೆಯ ಪುಣ್ಯದ ಪುಂಜ ಮಾನುಷಭಾವವ ಪಡೆದುದೆಂಬಂತೆ' ಇದ್ದ, 'ಧರೆಯ ಪೊರೆವ ಧರ್ಮವ ಸಂಪಾದಿಪ ಧುರವ ಗೆಲುವ' ಅರಸನನ್ನು ಕಂಡಾಗ ಹೆಮ್ಮೆ, ರಾಣಿಯಲ್ಲಿ ಮಮತೆ, ಆಸ್ಥಾನದ ಪಂಡಿತರಲ್ಲಿ ಭಕ್ತಿ ಗೌರವ ಹಾಗೂ ಅವರಲ್ಲಿ ವಿದ್ಯೆಕಲಿಯಬೇಕೆಂಬ ಆಸೆ ಕ್ರಮೇಣ ಹೊನ್ನಮ್ಮನಲ್ಲಿ ಉಂಟಾದವು. ಹೊನ್ನಮ್ಮನ ಕವಿತಾವಲ್ಲಿಗೆ ಈಗ ಆಶ್ರಯ ದೊರೆಯಿತು. ರಾಣಿಯ ಬಳಿ ಹೊನ್ನಮ್ಮನ ಊಳಿಗವೇನೋ ಸಂಚಿಯ ಕೆಲಸ. ಆಕೆ ತನ್ನ ಕೆಲಸದಲ್ಲಿ ತೋರಿಸಿದ ಶ್ರದ್ಧೆ, ವಿನಯಾದಿಗುಣಗಳು ಕಾಲಕ್ರಮದಲ್ಲಿ ದೊರೆಯ ದೃಷ್ಟಿಯನ್ನು ಆಕೆಯತ್ತ ಸೆಳೆದವು. ಅವರ 'ಸತ್ ಕೃಪಾವಲೋಕನ' ಇವಳಲ್ಲಿ ಉಂಟಾಯಿತು. ಅರಸರ ಕೃಪಾರಸದಿಂದ ಈ 'ಕಬ್ಬೊನ್ನು ಚೆಂಬೊನ್ನಾ'ಯಿತು.

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ಹೊನ್ನಮ್ಮ ನಿಜಕ್ಕೂ ಹೊನ್ನಮ್ಮನೇ ಆದಳು. ಹೊನ್ನಮ್ಮನ ಸೌಶೀಲ್ಯ ಜಾಣ್ಮೆ ಮುಂತಾದ ಗುಣಗಳಿಂದ ಆಕರ್ಷಿತರಾದ ಅಳಸಿಂಗರಾರ್ಯನು ಈಕೆಗೆ ಸಾಹಿತ್ಯವನ್ನು ಓದಿಸಿದನು; ಕಾವ್ಯ ಅಲಂಕಾರ ನಾಟಕಗಳನ್ನು ಪಾಠಮಾಡಿಸಿದನು. ಈಗ ಹೊನ್ನಮ್ಮನ ಪ್ರತಿಭೆಗೆ ಸಾಣೆ ಹಿಡಿದಂತಾಗಿ 'ಪ್ರತಿಭಾನಂ ಕಾವ್ಯವಿದ್ಯಾಪ್ರಚಯಪರಿಚಯಂ ವೃದ್ಧಸೇವಾನುರಾಗಂ ಸತತಾಭ್ಯಾಸಪ್ರಯತ್ನಂ ಕವಿತೆಗೆ ನಿಯತಂ ಕಾರಣಂ' ಎಂಬ ಮಾತು ಇವಳಲ್ಲಿ ಸಾರ್ಥಕವೆನಿಸಿತು. ಹೊನ್ನಮ್ಮ 'ಸರಸ ಸಾಹಿತ್ಯದ ವರದೇವತೆ' ಎಂದು ಆಸ್ಥಾನದ ಎಲ್ಲರಿಂದ ಹೊಗಳಿಸಿಕೊಳ್ಳುವ ಯೋಗ್ಯತೆಯನ್ನು ಪಡೆದಳು. ಆದರೆ ಆಕೆ ಅದುವರೆಗೆ ಯಾವ ಕವನವನ್ನೂ ಕಟ್ಟಿರಲಿಲ್ಲ.

ಆ ಸನ್ನಿವೇಶವೂ ಹೊನ್ನಮ್ಮನ ಬಾಳಿನಲ್ಲಿ ಬಹುಬೇಗ ಬಂದೊದಗಿತು. ಹೊನ್ನಮ್ಮನ ಯೋಗ್ಯತೆಯನ್ನು ಅರಸರು ಈ ಮೊದಲೇ ಅಳಸಿಂಗರಾರ್ಯರಿಂದ ಕೇಳಿ ತಿಳಿದು ಕೊಂಡಿದ್ದರು. ಒಮ್ಮೆ ಅವರು ಪಟ್ಟದ ರಾಣಿಯ ಅಂತಃಪುರಕ್ಕೆ ಬಂದು, ಹೊನ್ನಮ್ಮನನ್ನು ಮನ್ನಿಸಲೆಂಬಂತೆ ಪೊನ್ನ ಪುತ್ತಳಿಯಂತೆ ಶೋಭಿಸುತ್ತಿದ್ದ ಮನ್ನಣೆವಡೆದ ಪಟ್ಟದ ರಾಣಿಯ ಮುಖನೋಡಿ ಈರೀತಿ ನುಡಿದರು—

ಅರಸಿ ಕೇಳೀ ಹೊನ್ನಿ ಸರಸಸಾಹಿತ್ಯದ
ವರದೇವತೆ ತಾನೆಂದು
ಪರಮಾರ್ಥವಾದಿಯಳಸಿಂಗರಾರ್‍ಯನು
ಪರಿಪರಿಯೊಳು ಬಣ್ಣಿಪನು.

ವಿದ್ಯೆಕಲಿಸಿದ ಗುರುಗಳು ಶಿಷ್ಯರನ್ನು ಹೊಗಳಿದರೆ ತಾನೆ ಆ ಓದಿಗೆ ಸಾರ್ಥಕ ಹಾಗೂ ಅದರಿಂದ ಪ್ರಯೋಜನ? ಆದ್ದರಿಂದ

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ಇವಳು ಕಾವ್ಯಾಲಂಕಾರನಾಟಕಗಳ
ಪವಣಿಗೆಯಿರವ ಬಲ್ಲವಳು
ಇವಳ ಸಾಹಿತ್ಯದ ಸವಿಗೆಳಸುತೆನ್ನ
ಕಿವಿಗಳು ಕಡುಬುಗೊಂಡಿಹವು.

ಪವಣಿಗೆಯೊಪ್ಪೆ ಪುರುಳು ಪೊಗರೇರೆಯಂ
ಗವಿಸೆಯಲಂಕಾರಗಳು
ಕವಿಡು ಪರಿಯೆ ರಸದೊಳ್ಗಂಪು ಕಮ್ಮನೆ
ಕವಿತೆಯೊಂದನು ಪೇಳಿಸಿಂದು.

ದೊರೆಯ ಮಾತನ್ನು ಕೇಳಿ ಹೊನ್ನಮ್ಮನಿಗೆ 'ಪೆಳವ ನೆಡೆಗಾ ಗಂಗೆ ತಾನ್ನೈದೆ ಬಂದುದೆಂಬಂತೆ' ಆಯಿತು. ಆಕೆಗೆ ಒಂದು ಕಡೆ ಹೆಮ್ಮೆ, ಮತ್ತೊಂದು ಕಡೆ ಲಜ್ಜೆ. ಹೀಗಾಗಿ ಹೊನ್ನಮ್ಮ ಹಿಂದೆ ಹಿಂದೆಯೇ ಇರಲು, ರಾಣಿ ಆಕೆಯನ್ನು ಕುರಿತು 'ಕಂದ ಬಾರ, ಎನ್ನ ಕಟ್ಟಾಣಿ ಪೆಣ್ಮಣಿಯೆ ಬಾ' ಎಂದು ಕೈಹಿಡಿದು ಕರೆದು, ತನ್ನ ಒತ್ತಿನಲ್ಲಿಯೇ ಅವಳನ್ನು ಕೂಡಿಸಿಕೊಂಡು 'ನೆವಮಿನಿತಿಲ್ಲದೆರಕಗೂಡಿ' ಮನ್ನಿಸಿ 'ಕಲಿತ ವಿದ್ಯೆಯನ್ನು ಬಲ್ಲವರಿಗೆ ಕೇಳಿಸುವುದೇ ಫಲ. ಇದನ್ನು ನೆನೆದು ನೀನು ಸ್ವಲ್ಪವೂ ಅಂಜದೆ ಅಳುಕದೆ ಕಾವ್ಯವೊಂದನ್ನು ಹೇಳು' ಎಂದು ಅಪ್ಪಣೆ ಮಾಡಿದಳು.

ಹೊನ್ನಮ್ಮನಲ್ಲಿ ಹುದುಗಿ ಕುಳಿತಿದ್ದ ಪ್ರತಿಭೆ ಈಗ ಹೂವಾಗಿ ಅರಳಿ ಫಲಬಿಡುವುದಕ್ಕೆ ತಕ್ಕ ಸಂದರ್ಭ ಒದಗಿತು. ಸತ್ಕಾವ್ಯವೊಂದನ್ನು ರಚಿಸಬೇಕೆಂಬ ಅಪೇಕ್ಷೆ ಆಕೆಯಲ್ಲಿ ಉಂಟಾಗಿ, ವಿನಯವನ್ನು ಮೀರದೆ ದೊರೆಗೆ ಈ ರೀತಿ ಬಿನ್ನವಿಸಿದಳು.

ಆದೊಡಮೆನ್ನ ಕವಿತೆಗಬ್ಬದ ಬಗೆ
ಈ ದಿವ್ಯ ಸಭೆಗೆ ಸಂಗತಮೆ

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ಪಾದದೂಳಿಗದೊಳು ಬಳೆದ ಬಾಲಕಿಯೆಂ
ದಾದರದಿಂದಾಲಿಪುದು.
ಭಾವಿಸೆ ಬಿಜ್ಜೆಗಲಿತ ಪೆರ್ಮೆಯೆನಗಿಲ್ಲ
ದೇವತೆಗಳ ವರವಿಲ್ಲ
ಆವುದನುಪದೇಶವಿತ್ತಸಾರ್ಯನು ತನ
ಗಾ ವಿಧದೊಳು ಪೇಳುವೆನು.
ಧರ್ಮದ ತನಿಗಂಪು ತಲೆದೋರೆ ಕಾವ್ಯದ
ಪೆರ್ಮೆ ಬೇರ್ವರಿದು ಬಿತ್ತರಿಸೆ
ನಿರ್ಮಲ ಸತಿಯರ ಧರ್ಮವ ಕೃತಿಯಾಗಿ
ನಿರ್ಮಿಸಿ ನೆಗಳಿಪೆನಿಂದು.

ಹೀಗೆ ಬಿನ್ನವಿಸಿ ಅರಸನ ಅಪ್ಪಣೆಯನ್ನು ಪಡೆದು ಹೊನ್ನಮ್ಮ ರಚಿಸಿದ ಕೃತಿಯೇ 'ಹದಿಬದೆಯ ಧರ್ಮ.'

೩ ಹದಿಬದೆಯ ಧರ್ಮ

ಹದಿಬದೆಯ ಧರ್ಮವನ್ನು ಪರಿಚಯಮಾಡಿಕೊಡುವುದಕ್ಕಿಂತ ಮುಂಚೆ, ಪೀಠಿಕಾರೂಪವಾಗಿ ಕೆಲವು ಮಾತುಗಳನ್ನು ಹೇಳುವುದು ಸೂಕ್ತವೆಂದು ತೋರುತ್ತದೆ. ಚಿಕ್ಕಂದು, ಭೂಮಿಯಲ್ಲಿ ಅಡಗಿರುವ ರತ್ನದಂತೆ ಎಲ್ಲಿಯೋ ಹುದುಗಿದ್ದು, ಯಳಂದೂರು ದೇವಮ್ಮನ ಕೃಪೆಯಿಂದ ಅಭ್ಯುದಯವನ್ನು ಹೊಂದಿ, ಕಾಲಕ್ರಮದಲ್ಲಿ ದೊರೆಯ ವಿಶ್ವಾಸದಿಂದ ಅವನ ಆತ್ಮೀಯಳೆನಿಸಿ, ಆಸ್ಥಾನದ ವಿದ್ವಾಂಸರ ಸನ್ನಿಧಿಯಲ್ಲಿ ಸಾಕಷ್ಟು ವಿದ್ಯೆಯನ್ನು ಸಂಪಾದಿಸಿ, ತನ್ನ ಕಾಲದ ಹೆಣ್ಣು ಮಕ್ಕಳ ಕಷ್ಟನಿಷ್ಠುರಗಳನ್ನು ಅರಿತ ಹೊನ್ನಮ್ಮನು, ಸಾಹಿತ್ಯದ ರೀತಿಯಲ್ಲಿ ಸತೀಧರ್ಮವನ್ನು ಹೇಳುವ ಕಷ್ಟವಾದ ಕೆಲಸಕ್ಕೆ ಮನಸ್ಸು ಮಾಡಿದುದು ಅವಳಲ್ಲಿದ್ದ ಔಚಿತ್ಯಜ್ಞಾನಕ್ಕೆ ಸಾಕ್ಷಿ

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ಯಾಗಿದೆ. ಹೆಂಗಸರಿಗೆ ವಿದ್ಯೆ ಸಲ್ಲದು ಎಂಬ ಅಭಿಪ್ರಾಯ ಮೂಡಿದ್ದ ಕಾಲದಲ್ಲಿ ಆಕೆ ತನಗೆ ದೊರಕಿದ ಅವಕಾಶವನ್ನು ಸರಿಯಾಗಿ ಉಪಯೋಗಿಸಿಕೊಂಡಳು; ವಿದ್ಯೆಗಳಿಸಿದಳು. ಕಾವ್ಯನಾಟಕ ಅಲಂಕಾರಶಾಸ್ತ್ರಗಳ ಅಭ್ಯಾಸದ ಜೊತೆಗೆ ಆಕೆ ರಾಮಾಯಣ, ಮಹಾಭಾರತ, ಭಗವದ್ಗೀತೆ, ಭಾಗವತ, ಮನು ಧರ್ಮಶಾಸ್ತ್ರ ಈ ಸಂಸ್ಕೃತ ಗ್ರಂಥಗಳ ಗಾಢವಾದ ಪರಿಚಯ ವನ್ನು ಪಡೆದಳು. ಭವಭೂತಿಯ 'ಉತ್ತರರಾಮಚರಿತ್ರೆ', ಕಾಳಿದಾಸನ 'ಶಾಕುಂತಳ', ಮನುಸ್ಮೃತಿ, ಶ್ರೀಭಾಗವತ ಈ ಗ್ರಂಥಗಳಿಂದ ಹೊನ್ನಮ್ಮನು ಮಾಡಿರುವ ಅನುವಾದಗಳೂ ಭಗವದ್ಗೀತೆ, ಮಹಾಭಾರತ, ಶ್ರೀಭಾಗವತ, ರಾಮಾಯಣ, ವಿಷ್ಣುಪುರಾಣಗಳಿಂದ ಉದ್ಧರಿಸಿರುವ ಶ್ಲೋಕಗಳೂ ಈ ಅಂಶವನ್ನು ಸ್ಪಷ್ಟಗೊಳಿಸುತ್ತವೆ. ಹೊನ್ನಮ್ಮನ ಸಿದ್ಧಿಯನ್ನು ನೆನೆದರೆ ಮಹಾಕಾವ್ಯವೊಂದನ್ನು ಕಟ್ಟಲು ಆಕೆಗೆ ಕಷ್ಟವೇನೂ ಆಗಿರಲಿಲ್ಲ. ಆದರೆ ಆಕೆಗೆ ಆಕಡೆ ಮನಸ್ಸು ಹೋಗಲಿಲ್ಲ. ಇಹ ಪರಗಳೆರಡಕ್ಕೂ ಒಳ್ಳೆಯದನ್ನು ತರುವ ಸತ್ಕಾವ್ಯರಚನೆಯ ಕಡೆ ಆಕೆಯ ಮನಸ್ಸು ಹರಿಯಿತು.

ಪದಿನೆಂಟು ಬಣ್ಣನೆಯೆಂದು ಬವಣಿಗೊಂಡು
ಪದಗೆಟ್ಟು ಬಯಲ ಬಣ್ಣಿಸದೆ
ಮುದದೊಡನಿಹಪರದೇಳ್ಗೆವಡೆಯೆ ಪದಿ
ಬದೆಯ ಧರ್ಮವ ಬಣ್ಣಿಪೆನು

ಈ ಗುರಿಯನಿಟ್ಟುಕೊಂಡೇ ಹೊನ್ನಮ್ಮ ಸಂಸ್ಕೃತಭಾಷೆಯ ಮಹಾಗ್ರಂಥಗಳ ಸಾರವನ್ನು ತನ್ನ ಗ್ರಂಥದಲ್ಲಿ ತಂದಳು.

ಆದಿಕಾವ್ಯದೊಳೈದನೆಯ ವೇದದೊಳು ಮ
ನ್ವಾದಿಕ ಧರ್ಮಶಾಸ್ತ್ರದೊಳು

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ಭೇದಿಸಿ ಪಿರಿಯರು ಪೇಳಿದುದನೆ ಕೃತಿ
ಗೈದಾನು ಕಿವಿಗೊಳಿಸಿದೆನು.

ತನ್ನ ಗ್ರಂಥ 'ಸತಿಯರ ಧರ್ಮದ ಸಾರ', ಇದನ್ನು ಪ್ರತಿಯೊಬ್ಬ ಹೆಂಗಸೂ ಮನನ ಮಾಡಬೇಕೆಂಬುದು ಹೊನ್ನಮ್ಮನ ಅಚಲವಾದ ನಂಬಿಕೆ.

ಇದು ಪಾತಿವ್ರತ್ಯ ಧರ್ಮತತ್ವದ ಸಾರ
ವಿದೆ ಸಂಜೀವನ ಮಂತ್ರ
ಇದು ಪರಮಾರ್ಥ ಹಿತೋಪದೇಶದ ತಿರು
ಳಿದನು ಸತಿಯರೋದುವುದು.

ಹೆಣ್ಣುಮಕ್ಕಳಿಗೆ ಹಾಡಲು ಯೋಗ್ಯವಾದ ಅಚ್ಚಗನ್ನಡ ವೃತ್ತವಾದ ಸಾಂಗತ್ಯದಲ್ಲಿ, ಇನಿದಾದ ಮಾತುಗಳಲ್ಲಿ ರಚಿತವಾದ ಹದಿಬದೆಯ ಧರ್ಮದಲ್ಲಿ ಒಂಬತ್ತು ಸಂಧಿಗಳಿವೆ. ನೀತಿಯೇ ಕಾವ್ಯವಸ್ತುವಾಗಿವುಳ್ಳ ಈ ಕಾವ್ಯದಲ್ಲಿ ಎರಡನೆಯ ಸಂಧಿಯಲ್ಲಿ ಬರುವ ಪಾತಿವ್ರತ್ಯದ ಮಹಿಮೆಯನ್ನು ಬೀರುವ 'ಬ್ರಾಹ್ಮಣ ಮತ್ತು ಪತಿವ್ರತೆ'ಯ ಮಹಾಭಾರತದ ಕಥೆಯನ್ನು ಬಿಟ್ಟರೆ ಇನ್ನಾವ ಕಥೆಯೂ ಈ ಕಾವ್ಯದಲ್ಲಿ ಬರುವುದಿಲ್ಲ. ಪ್ರತಿಸಂಧಿಯ ಮೊದಲಲ್ಲಿ ಶ್ರೀರಂಗಪಟ್ಟಣದ ರಂಗನಾಥ ಸ್ವಾಮಿಯ ಸ್ತುತಿಯೂ, ಕೊನೆಯಲ್ಲಿ 'ಚೆನ್ನಿಗ ಚಿಕ್ಕದೇವರಾಯನ ಸಂಚಿಯ ಹೊನ್ನಮ್ಮನುಸುರ್ದ ಕಬ್ಬದೊಳು' ಎಂಬ ಮಾತೂ ಬರುತ್ತವೆ.

ಹದಿಬದೆಯ ಧರ್ಮದ ಪೀಠಿಕಾಸಂಧಿ ಗ್ರಂಥಕ್ಕೆ ಪ್ರಸ್ತಾವನೆ ಇದ್ದಂತೆ. ಇದರಲ್ಲಿ ಚಿಕ್ಕದೇವರಾಜ ಒಡೆಯರವರೆಗೆ ಯದುವಂಶದ ಸಂಗ್ರಹವಾದ ವರ್ಣನೆ, ಚಿಕ್ಕದೇವರಾಜ ಒಡೆಯರ

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ಮತ್ತು ಪಟ್ಟದ ರಾಣಿ ದೇವಮ್ಮನ ಹಿರಿಮೆಯ ವರ್ಣನೆ, ಇವರ ಆಸ್ಥಾನದಲ್ಲಿ ವಿನಯವತಿಯಾಗಿ ಶೀಲವತಿಯಾಗಿ ಸದ್ದುಗದ್ದಲ ವಿಲ್ಲದ ವ್ಯಕ್ತಿಯಾಗಿ ಹೊನ್ನಮ್ಮ ವಿದ್ಯೆಯನ್ನು ಸಂಪಾದಿಸಿ ಅರಸರ ಕಣ್ಣಿಗೆ ಬಿದ್ದದ್ದು, ದೊರೆಗಳು ಹೊನ್ನಮ್ಮನಿಂದ ಕಾವ್ಯರಚನೆಮಾಡಿಸಲು ಬಯಸಿದ್ದು, ಹೊನ್ನಮ್ಮನು ರಾಜನ ಅಪ್ಪಣೆಯನ್ನು ತಲೆಯಲ್ಲಿ ಹೊತ್ತು ಹದಿಬದೆಯ ಧರ್ಮವನ್ನು ರಚಿಸಲು ಮನಸ್ಸು ಮಾಡಿದ್ದು—ಈ ವಿಷಯಗಳನ್ನು ಹೇಳಿದೆ. ಪ್ರತಿಯೊಬ್ಬರಿಗೂ ತಮ್ಮ ತಮ್ಮ ಕೃತಿಗಳಲ್ಲಿ ಅಭಿಮಾನವಿರು ವಂತೆ ಹೊನ್ನಮ್ಮನಿಗೂ ತನ್ನ ಕೃತಿಯಲ್ಲಿ ಅಭಿಮಾನವುಂಟು. ಇದನ್ನು ತಪ್ಪೆಂದು ಯಾರೂ ಭಾವಿಸಲಾಗದು. ಈ ಗ್ರಂಥದ ಮಹಿಮೆಯನ್ನು ಸಾರುವ ಒಂದೆರಡು ಪದ್ಯಗಳು ಇವು—

ಸತಿಯರೀ ಕೃತಿಯನಾಲಿಸಿದೊಡಂದಂದಿಗೆ
ಪತಿಭಕ್ತಿ ಬಣ್ಣವೇರುವುದು
ಮತಿ ಮಸುಳದೆ ಮರವೆದೋರದಿಹ ಪರ
ದತಿಶಯವನುಗೂಡುವುದು.
ಎಳವೆಣ್ಗಳೀ ಕೃತಿಗೇಳೆ ತಮ್ಮಿನಿಯರ
ನೆಳಮೆಯೊಳಳವುಗೆಡಿಸದೆ
ಬಳಿಸಂದು ಬಾಳುವರತ್ತೆ ಮಾವಂದಿರ
ನೊಲುವುಗೈದೊಳ್ಪುವಡೆವರು.
ಮನೆವಾಳ್ತಿಯರಿಯದ ಮರುಳುವೆಣ್ಣೀ ಕೃತಿ
ಯನೆ ಮನವೊಲಿದೋದಿದೊಡೆ
ಜನರಿವಳನು ಪೋಲ್ವ ಜಾಣೆ ಜಗದೊಳಿ
ಲ್ಲೆನೆ ಚಾತುರ್ಯ ವಡೆವಳು.

ಪತಿವ್ರತೆಯ ಮಹಿಮೆಯನ್ನು ವರ್ಣಿಸುವುದಕ್ಕಾಗಿಯೇ ಎರಡನೆಯ ಸಂಧಿ ಮೀಸಲಾಗಿದೆ. ಪತಿಯನ್ನೇ ಪರದೇವತೆ

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ಯೆಂದು ತಿಳಿದು ಭಜಿಸುವುದು ಲಕ್ಷ್ಮೀಪತಿಯ ಆಜ್ಞೆ. ಪತಿ ಭಕ್ತಿ ಬೇರೆಯಲ್ಲ, ಶ್ರೀಪತಿಯ ಭಕ್ತಿ ಬೇರೆಯಲ್ಲ. ಆದರೆ ಇವೆರಡಕ್ಕೂ ಇರುವ ವ್ಯತ್ಯಾಸ ಇಷ್ಟೆ. ಮಾಧವನ ಭಕ್ತಿಯ ವಿಷಯದಲ್ಲಿ ಮತಭೇದವಿದೆ. ಆದರೆ ಪತಿಭಕ್ತಿಯ ವಿಷಯದಲ್ಲಿ ಮತಭೇದವೇನಿದೆ ? ವಾಯು ಬೀಸುವುದೂ, ಸೂರ್ಯನು ತೇಜಸ್ವಿಯಾಗಿ ಬೆಳಗುವುದೂ ಸಾಧ್ವಿಯರ ಪ್ರಭಾವದಿಂದ. ಕಲಂಕವಿಲ್ಲದ ಪತಿವ್ರತೆಯರ ಬಲದಿಂದಲೇ 'ಮಳೆಗರೆವುದು, ಬೆಳೆ ಪೆರ್ಚುವುದು, ಇಳೆ ತಳಕಿಳಿದು ಪೋಗದೆ ತಡೆದಿಹುದು' ಎಂದು ಬಲ್ಲವರು ಹೇಳುತ್ತಾರೆ. ಪಿತೃಗಳೂ ಕೂಡ ಇವರು ಮಾಡಿದ ಅಡಿಗೆಯನ್ನು ಉಣ್ಣಲು ಆಶೆಪಡುವರು. 'ಇವರಿದ್ದೆಡೆ ಪುಣ್ಯತೀರ್ಥ ಪುಣ್ಯಕ್ಷೇತ್ರ, ಇವರಿದ್ದ ಮನೆ ದೇವ ಭವನ ಇವರೆ ಪ್ರತ್ಯಕ್ಷದೇವತೆಯರು ದಿಟ' ಎಂದು ವೇದವನ್ನು ಬಲ್ಲವರು ಹೇಳುವಾಗ, ಉದಯಕಾಲದಲ್ಲಿ ಪತಿವ್ರತೆಯರ ಹೆಸರನ್ನು ಹಾಡಿದರೆ ಪಾಪ ಪರಿಹಾರವಾಗುವುದೇನಾಶ್ಚರ್ಯ ಪತಿವ್ರತಾಧರ್ಮವನ್ನು ಆಚರಿಸಲು ದೇಶಕಾಲಗಳ ಎಲ್ಲೆ ಯಾಗಲೀ, ವ್ರತನಿಯಮ ಉಪವಾಸಗಳ ಕಟ್ಟಾಗಲೀ ಯಾವುದೂ ಇಲ್ಲ. ಪತಿವ್ರತಾಧರ್ಮವನ್ನು ಆಚರಿಸುವ ಸಾಧ್ವಿಯರಿಗಿಂತ ಋಷಿಪತ್ನಿಯರು ಏನು ಹೆಚ್ಚು ಎಂದು ಕೇಳುವ ಹೊನ್ನಮ್ಮನ ಪ್ರಶ್ನೆ ನ್ಯಾಯವಾಗಿಯೇ ಇದೆ.

ಮನೆಯೆ ಧರ್ಮಾಶ್ರಮ ಮನೆವಾರ್ತೆಯೆ ಧರ್ಮ
ವಿನಿಯನೂಳಿಗ ದೇವಪೂಜೆ
ಮನನವಿನಿಯನ ನೆನೆವುದೆ ಸಾಧ್ವಿಯರಿಗೆ
ಮುನಿಸತಿಯರ ನೋಡಿಯೇನು ?

ಸಂಸಾರವನ್ನು ತೊರೆಯದೆ, ಪತಿಸೇವೆಯೇ ಧರ್ಮವೆಂದು

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ಅರಿತು ನಡೆಯುವ ಸತಿಯರ ತಪಸ್ಸು, ಮಿಕ್ಕ ಯಾರ ತಪಸ್ಸಿಗಿಂತಲೂ ಕಡಿಮೆಯಾದುದಲ್ಲ, ಒಂದು ಕೈಮಿಗಿಲಾದುದು ಎನ್ನುವುದನ್ನು ನಿರ್ದೇಶಿಸಲು, ಮಹಾಭಾರತದ ಅರಣ್ಯ ಪರ್ವದಲ್ಲಿ ಒಂದು ಕಥೆಯುಂಟು. ಒಬ್ಬ ಮುನಿಪುಂಗವನು ವೇದವನ್ನು ಸಾಂಗವಾಗಿ ಓದಿದನು. ಸಕಲಧರ್ಮದ ತತ್ವಗಳನ್ನು ಅರಿತು ಆಚರಿಸಿಪನು. ದೋಷವಳಿದ ಮಹಿಮೆ ಅವನದಾಯಿತು. ಇನ್ನೂ ಹೆಚ್ಚಿನ ಸಿದ್ಧಿಗೆ ಬಯಸಿ, ಮನೆ ಬಿಟ್ಟು, ದೇಹವನ್ನು ದಂಡಿಸಿ ಕಾಡಿನಲ್ಲಿ ಘೋರವಾದ ತಪಸ್ಸನ್ನಾಚರಿಸಿದನು. ಇದರ ಫಲವಾಗಿ ಮುನಿಮುಖ್ಯನಾಗಿ ಮೆರೆದನು.

ಒಂದು ದಿನ ಇವನು ಬೇಸಿಗೆಯ ಬಿಸಿಲಿನಿಂದ ಬಳಲಿ, ಮರವೊಂದರ ನೆರಳಿನಲ್ಲಿ ನಿಂತನು. ಆಗ ಆ ಮರದ ಮೇಲಿದ್ದ ಒಂದು ಪಾರಿವಾಳ ಚೀರಿತು. ಆ ಧ್ವನಿಯನ್ನು ಕೇಳಿ ಬ್ರಾಹ್ಮಣನು ಕತ್ತೆತ್ತಿ ನೋಡಲು ಹಕ್ಕಿಯ ಪ್ರಾಣ ಅಡಗಿತು. ಮುನಿಗೆ ಪ್ರಾಣಕಳೆದುಕೊಂಡ ಹಕ್ಕಿಯಲ್ಲಿ ಒಂದುಕಡೆ ಮರುಕ; ಮತ್ತೊಂದು ಕಡೆ 'ತಾನೆಸಗಿದ ತಪಗಳ ಮೈಮೆಗೆ ಸರಿಯಿಲ್ಲ' ಎಂಬ ಹೆಮ್ಮೆ. ಹೀಗಾಗಿ ಅವನು ಹಸಿದು ಬ್ರಾಹ್ಮಣ ಬೀದಿಯೊಂದನ್ನು ಹೊಕ್ಕು, ಮನೆಯೊಂದರ ಮುಂದೆ ನಿಂತು ಅನ್ನವನ್ನು ಬೇಡಿದನು. ಮನೆಯಾಕೆ ಏಕಪತ್ನಿ, ಕುಲಸತಿ, ಸಾಧ್ವಿ. ಆಕೆ ಬ್ರಾಹ್ಮಣನನ್ನು ಮನ್ನಿಸಿದಳು. ಅವನಿಗೆ ಅನ್ನವಿಕ್ಕುವುದರಲ್ಲಿದ್ದಳು. ಅಷ್ಟರಲ್ಲಿ ಅವಳ ಗಂಡನು ಬಂದ ಕಾರಣ, ಅವನ ಉಪಚಾರದಲ್ಲಿ ತೊಡಗಿದ ಆಕೆ ಬ್ರಾಹ್ಮಣನಿಗೆ ಅನ್ನವಿಕ್ಕುವುದು ತಡವಾಯಿತು. 'ಹಸಿದ ಹಾರುವನನ್ನು ತಡವಕೂಡದು' ಎಂಬ ಗಾದೆಯಂತೆ ಬ್ರಾಹ್ಮಣನಿಗೆ ಸಿಟ್ಟು

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ನೆತ್ತಿಗೇರಿತು. 'ಸತಿಯರ ಧರ್ಮದ ಸಾರವನರಿಯದೆ' ಕೋಪದಿಂದ ಮುನಿ 'ನಮ್ಮದು ಘೋರವಾದ ತಪಸ್ಸು. ಅದನ್ನು ನೀನು ತಿಳಿಯೆ. ಇಲ್ಲಿ ಪತಿ ಶುಶ್ರೂಷೆಯ ಬಲ್ಮೆ ಫಲಿಸದು. ಯತಿಧರ್ಮದ ರೀತಿಯೇ ಬೇರೆ' ಎಂದನು. ಮುನಿಯ ಮಾತಿಗೆ ಆ ಸಾಧ್ವಿ ಹೇಳಿದಳು. 'ಬಳಲಿದೆ ಸಾಕಿನ್ನು. ಬಡಿಸಿದನ್ನವನುಂಡು ತಳುವದೆ ತಪವನಾಚರಿಸು. ಬೀಳುವಕ್ಕಿಯು ಬೀಳುಗೆಡಹಿದ ಬಿಂಕವೀ ಬಳಿಯೊಳು ಬಣ್ಣ ವಡೆಯದು. ಧರ್ಮಸೂಕ್ಷ್ಮದೊಂದಿರವ ನೀನರಿತವನಲ್ಲ. ಪರಮ ಪತಿವ್ರತೆಯರ ಬಗೆ ಬೇರಿದು. ಅನಸೂಯೆಯ ಮಹಿಮೆಯಿಂದ ತ್ರಿಮೂರ್ತಿಗಳು ಅತ್ರಿಗೆ ಮಕ್ಕಳಾದರು. ಸೀತೆಯ ಸತೀಧರ್ಮದಿಂದ ಅಗ್ನಿ ತಂಪಾದನು. ಧರ್ಮದ ತಾರತಮ್ಯ ನಿನಗೆ ತಿಳಿಯಬೇಕಾದರೆ ಮಿಥಿಲೆಯಲ್ಲಿರುವ ಧರ್ಮ ವ್ಯಾಧನಲ್ಲಿಗೆ ನಡೆ.' ಈ ಮಾತನ್ನು ಕೇಳಿದ ಬ್ರಾಹ್ಮಣನು ಆಶ್ಚರ್ಯಪಟ್ಟು, ಗರ್ವವುಳಿದು ಪಚ್ಚಾಗಿ ಆ ಸ್ಥಳದಿಂದ ಹೋಗಿರಬೇಕಲ್ಲವೇ ?

ಈ ಗ್ರಂಥದ ಮೂರನೆಯ ಸಂಧಿ ಹೆಣ್ಣು ತನ್ನ ಇನಿಯನನ್ನು ಹೇಗೆ ಅನುವರ್ತಿಸಿಕೊಂಡಿರಬೇಕು, ಅವನಿಗೆ ಹೇಗೆ ಉಪಚಾರ ವೆಸಗಬೇಕು ಎಂಬ ವಿಷಯಗಳನ್ನು ತಿಳಿಸಲು ಮೀಸಲಾಗಿದೆ. ತಂದೆತಾಯಿಗಳ ಮನೆಯನ್ನು ಬಿಟ್ಟು ಗಂಡನ ಮನೆಯನ್ನು ಸೇರಿದ ಹೆಣ್ಣು—

ಪತಿಯೆ ಪರಮುಗುರು ಪತಿಯೇ ದೇವತೆ
ಪತಿಯೆ ಸದ್ಗತಿಯೆಂದು
ಪತಿಯ ಪಾದಾಂಬುಜದೊಳು ಭಕ್ತಿಗೈವುದು
ಸತಿಯರ ಧರ್ಮದ ಸಾರ.

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ಪತಿಯೊಲವರಿತು ಪತಿಯ ಸೇರುವೆಯೊಳಿದ್ದು
ಪತಿಯೂಳಿಗಗಳನೆಸಗಿ
ಪತಿಯಾಣತಿಯ ಬಂದಿಯೊಳಡಗಿರ್ಪುದು
ಸತಿಯ ಧರ್ಮದ ಸರ್ವಸ್ವ.

ಈ ಕಾರ್ಯವನ್ನು ಮಾಡುವುದಾದರೂ ಹೇಗೆ? ಹೆಣ್ಣಿನ ಪಾಲಿಗೆ ಬಂದ ನಾರಾಯಣನ ಸ್ವರೂಪ ಗಂಡ. ತನ್ನ ಭಾಗ್ಯದ ಫಲ ಅವನೆಂದು ತಿಳಿದು ಹಗಲೆನ್ನದೆ ರಾತ್ರಿಯೆನ್ನದೆ ಅವನನ್ನು ಪತಿವ್ರತೆಯರು ಸೇವಿಸಬೇಕು. ಅವನ ವಿಷಯ ದಲ್ಲಿ ಮರೆಮೋಸಗಳು ಸಲ್ಲವು. ಪತಿವ್ರತೆಯ ಮನಸ್ಸು ಯಾವಾಗಲೂ

ಇಂತು ನೋಡುವೆನಿಂತು ನುಡಿವೆನಿಂತೆಸಗುವೆ
ನಿಂತು ಸೇರುವೆನಿಂತಿರುವೆ
ಇಂತು ಮನ್ನಿಪೆನಿಂತು ಮನಗರಗಿಪೆನೆಂದು
ಚಿಂತಿಪುದೇಕ ಚಿತ್ತದೊಳು.

ಮನೆಗೆಲಸ, ಮಕ್ಕಳ ಮುದ್ದು ಇವುಗಳಿಗಿಂತ ಮಿಗಿಲಾಗಿ, ಗಂಡನ ಧ್ವನಿ ಕೇಳುತ್ತಲೇ ಸೋಗೆ ನವಿಲು ಮುಗಿಲನ್ನು ಕಂಡು ಹೆಚ್ಚುವಂತೆ ಅವನನ್ನು ಮರ್ಯಾದೆ ಮಾಡಬೇಕು. ಯಾವರೀತಿಯಲ್ಲಿ ಉಟ್ಟು ತೊಟ್ಟರೆ ಗಂಡನಿಗೆ ಪ್ರಿಯವೆನಿಸು ವುದೋ ಆ ರೀತಿಯಲ್ಲಿ ಹೆಣ್ಣು ಅಲಂಕರಿಸಿಕೊಳ್ಳಬೇಕು. ಮನವಾರ್ತೆಯನ್ನು ಅರುಹಬೇಕಾದಾಗ ಮರ್ಯಾದೆ ಮೀರ ಬಾರದು. ಆಹಾರ, ಬಟ್ಟೆ ಮೊದಲಾದ ಕೊರತೆಗಳನ್ನು ಸಮಯಸಂದರ್ಭಗಳನ್ನರಿತು ಏಕಾಂತದಲ್ಲಿ ಬಿನ್ನೈಸಿಕೊಳ್ಳ ಬೇಕು. ಕೋಪವಂತೂ ಗಂಡನ ವಿಷಯದಲ್ಲಿ ಖಂಡಿತ ಸಲ್ಲದು. ಆದಕ್ಕೆ ಬದಲಾಗಿ ಅವನನ್ನು ದೈನ್ಯದಿಂದ ಸಮಾಧಾನಗೊಳಿಸ

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ಬೇಕು. ಒಮ್ಮೊಮ್ಮೆ ಗಂಡನಿಗೆ ಕೋಪಬಂದರೂ ಸಾಧ್ವಿಯಾದವಳು, ಅದನ್ನು ಮನಸ್ಸಿಗೆ ತಾರದೆ ಗಂಡನ ಬುದ್ಧಿಗೆ ಏನೋ ಮೋಸ ಬಂದಿರುವುದೆಂದು ತಿಳಿದು 'ಇತರರಿಯದಂತೇಕಾಂತ ಸಮಯದೊಳರುಹುವುದು.' ಗಂಡನು ಮಾಡುವ ಅನುಚಿತ ಕಾರ್ಯವನ್ನು ಕಂಡು 'ನಿನಗಿದು ನೀತವಲ್ಲೆಂದು ನೆನೆಯಿಪಿನಲ್ಲದೆ ನೇಮಿಪುದಿಲ್ಲೆಂದು', ವಿನಯದಿಂದ ಬಿನ್ನಯಿಸುವ ಹಕ್ಕು ಅವಳಿಗುಂಟು.

ಗರತಿಯರಾದವರು ಗರ್ವದಿಂದ ಬೀಗುವುದು ಎಂದಿಗೂ ಸಲ್ಲದು. ಈ ತೆರನಾದ ಗರ್ವಕ್ಕೆ ನಾನಾಕಾರಣಗಳಿರಬಹುದು. ತಾನು ದೊಡ್ಡವರ ಮಗಳು, ವಿದ್ಯೆಕಲಿತವಳು, ರೂಪವತಿ, ಪವಿತ್ರೆಯೆಂದು ಬೀಗುವುದು ಈ ಕಾರಣಗಳಲ್ಲಿ ಕೆಲವು. ಈ ರೀತಿ ಬೀಗದೆ ಗಂಡನ ಪಾದವೇ ಗತಿಯೆಂದು ನಂಬಿ ನಡೆಯುವುದು ಹೆಣ್ಣಿಗೆ ಉನ್ನತಿಯ ಮಾರ್ಗ. ಹೆಚ್ಚೇನು ?

ಮುಡಿಯೊಳು ಪೊತ್ತು ಮುದ್ದಿಸಿದೊಡೇನಡಿಗಳಿಂ
ಪೊಡವಿಗಿಟ್ಟೊರಸಿದೊಡೇನು
ಒಡೆಯ ನಿಟ್ಟಂತಿರ್ಪುದೊಡವೆಗುಚಿತಮೆಂದು
ನಡೆವುದು ನಲ್ಲೆಂಡಿರೊಲಿದು.

ಅವಳ ಪಾಲಿಗೆ ಬಂದ ಇನ್ನೊಂದು ಕರ್ತವ್ಯವೂ ಉಂಟು. ತಂದೆಯಾದರೇನು, ತಾಯಿಯಾದರೇನು, ತನಗೆ ಉಪಕಾರಿಗಳಾದವರಾದರೇನು ? ತನ್ನ ಗಂಡನಿಗಾಗದವರನ್ನು ಆಕೆ ದೂರವಾಗಿಡಬೇಕು. ಪತಿಯನ್ನು ಪರದೇವತೆಯೆಂದು, ದೊರೆಯೆಂದು, ಗುರುವೆಂದು ನಂಬಿ, ಹೆಂಡತಿಯಾದವಳು 'ಬಳಿವಿಡಿದಿನಿಯನ ಪಾದಾರವಿಂದದ ನೆಳಲಂತೆ ನೇಮದೊಳಿಹುದು.' ಹೀಗಿದ್ದರೆ ಸತಿಯರು ಪತಿಗೆ ಅಂತರಂಗದವರಾಗುತ್ತಾರೆ. ತಮ್ಮ

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ಲೋಕೋತ್ತರವಾದ ಸೇವೆಯಿಂದ ಪತಿಹಿತೆಯಾದವರ ಪರಂಪರೆಯೇ ಇದೆ. ಅಡವಿಯಲ್ಲಿ ತನ್ನನ್ನು ಬಿಟ್ಟು ಹೋದ ನಳನಲ್ಲಿ ದಮಯಂತಿ ಪ್ರೀತಿ ತೋರಲಿಲ್ಲವೆ? ಕಾಡಿನಲ್ಲಿ ಕಷ್ಟಬಂದರೂ ರಾಮನನ್ನು ಅನುಸರಿಸಿ ಸೀತೆ ಕೀರ್ತಿಪಡೆದಳು. ದ್ರೌಪದಿ ಅಜ್ಞಾತವಾಸದಲ್ಲಿಯೂ ಧೈರ್ಯಗೆಡದೆ ಪಾಂಡವರನ್ನು ಒಲಿಸಿ ಹದಿಬದೆಯರ ಬೈತಲೆ ಮಣಿಯೆನಿಸಿದಳು. ಅರುಂಧತಿ, ಅತ್ರಿ, ಅನುಸೂಯೆ ಇವರು ತಮ್ಮ ಪಾತಿವ್ರತ್ಯದಿಂದ ಇಂದಿಗೂ ಲೋಕಕ್ಕೆ ಮಾರ್ಗದರ್ಶಕರಾಗಿದ್ದಾರೆ.

ಹೆಣ್ಣು ಲೋಕದಲ್ಲಿ ಮಗಳು, ಸೋದರಿ, ಸೊಸೆ, ಅತ್ತಿಗೆ ನಾದಿನಿ, ಹೆಂಡತಿ, ತಾಯಿ, ಕುಲದೇವತೆಯೆಂದು ಕೀರ್ತಿತಳಾಗಿದ್ದಾಳೆ. ಆಕೆ ತನ್ನ ಗಂಡನ ವಿಷಯದಲ್ಲಿ ಮಾತ್ರ ಅವನಿಗೆ ಮೆಚ್ಚಾಗುವಂತೆ ನಡೆದು ಅವನ ಪ್ರೀತಿಯನ್ನು ಗಳಿಸಿದರೆ ಸಾಲದು. ಆಕೆ ತನ್ನ ಗಂಡನಿಗೆ ಪ್ರಿಯರಾದವರ ವಿಷಯದಲ್ಲಿ ಎಂದರೆ ಅತ್ತೆಮಾವಂದಿರ ಮತ್ತು ಅವನ ಇತರ ಬಂಧುಗಳ ವಿಷಯದಲ್ಲಿ ಮರ್ಯಾದೆಯಿಂದ ವರ್ತಿಸಬೇಕು. ಆ ವಿಷಯವನ್ನು ನಾಲ್ಕನೆಯ ಸಂಧಿಯಲ್ಲಿ ಹೇಳಿದೆ.

ಗಂಡನನ್ನು ಬಿಟ್ಟರೆ, ಅತ್ತೆಯ ಮನೆಯಲ್ಲಿ ಹೆಣ್ಣು ಅತ್ತೆಯ ಮನಸ್ಸನ್ನರಿತು ನಡೆಯಬೇಕಾಗಿದ್ದುದು ಬಹು ಮುಖ್ಯವಾಗಿತ್ತು–ಅದರಲ್ಲೂ ಹಿಂದಿನ ಕಾಲದಲ್ಲಿ. ಅತ್ತೆ ಮಾವಂದಿರು ಹೆಣ್ಣಿಗೆ ಪೂಜ್ಯತಮರು. ತನ್ನ ತಂದೆತಾಯಿಗಳಿಗಿಂತಲೂ ತನ್ನ ಇನಿಯನನ್ನು ಪೆತ್ತವರು ಮಿಗಿಲೆಂದು ತಿಳಿದು ಅವರ ಚಿತ್ತವನ್ನು ಸೆರೆಗೊಂಡು ಸೊಸೆಯಾದವಳು ನಡೆಯಬೇಕು. ಅತ್ತೆಯ ಸ್ವಭಾವ ಹೇಗಿದ್ದರೇನು; ಆಕೆ ಸೊಸೆಯನ್ನು ಹೇಗೆ ಕಂಡರೇನು?

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ಎಂತು ಕಾಪಿಟ್ಟೊಡಮೇನ ಬೆಸಸಿದೊಡ
ಮಂತರಂಗದೊಳನುಗೆಡದೆ
ಚಿಂತಿಸಿಯಳಲದೆ ಸಿಡಿಮಿಡಿಗೊಳದತಿ
ಸಂತೋಷದೊಳು ಸಮ್ಮತಿಪುದು

ಅತ್ತೆಯ ವಿಷಯದಲ್ಲಿ ಎದಿರುತ್ತರ ಸಲ್ಲದು.

ಉತ್ತರಕುತ್ತರವಿತ್ತಿದಿರಾಡದೆ
ಒತ್ತಿ ನುಡಿಯದೊತ್ತರಿಸದೆ
ಮತ್ತವರಿತ್ತಾಣತಿಯ ಮಸ್ತಕದೊಳು
ಪೊತ್ತು ಪೂಜಿಸುತೆಸಗುವುದು.

ಅತ್ತೆಮಾವಂದಿರನ್ನು ಅವಮಾನಗೊಳಿಸಕೂಡದು; ಅವರಿಗೆ ಕೋಪ ಬರುವಂತೆ ಮಾಡಕೂಡದು. ಇವರು ಮುದುಕರು, ಚಮರರಲ್ಲ ಎಂದು ಅವರನ್ನು ಜರೆದಾಡಲೂಬಾರದು. ಅವರಿತ್ತ ಹಿತೋಪದೇಶದಂತೆ ನಡೆಯುವುದೇ ಹೆಣ್ಣಿನ ಧರ್ಮ. ಹೆಚ್ಚೇನು? ಸೊಸೆಯಾದವಳು ತನ್ನ ಗರ್ವವನ್ನು ಬದಿಗೊತ್ತಿ, ತಾಳ್ಮೆಯಿಂದ ಮನೆಯ 'ಸುತ್ತುಗೆಲಸವ ಸೊಲ್ಲಿಸದೆಸಗುವು ದಿಂತತ್ತೆಯನನುವರ್ತಿಸುವುದು.' ಅಷ್ಟೇ ಅಲ್ಲ 'ಅತ್ತಿಗೆ ನಾದಿನಿ ಯರೊಳಂತರಂಗವ ಪತ್ತುಗೆಗೊಳಿಸಿ' ಬಾಳಬೇಕಾದುದೂ ಹೆಣ್ಣಿನ ಧರ್ಮ.

ಅತ್ತೆಯನ್ನು ನೆರಳಿನಂತೆ ಅನುವರ್ತಿಸಿ ನಡೆಯುವ ಸೊಸೆಯ ವಿಷಯದಲ್ಲಿ ಅತ್ತೆಯ ಕರ್ತವ್ಯವೇನೆಂಬುದನ್ನು ತಿಳಿಸಲು ಹೊನ್ನಮ್ಮ ಮರೆತಿಲ್ಲ. ತಂದೆತಾಯಿಗಳನ್ನು ಬಿಟ್ಟು ತಮ್ಮಲ್ಲಿಗೆ ಬಂದಿರುವ ಸೊಸೆಯನ್ನು ಅತ್ತೆಯಾದವಳು ಬಾಧಿಸಕೂಡದು. ಅಂದಂದಿಗೇ ಅವಳನ್ನು ಊಟ, ತೊಡಿಗೆ, ಮಜ್ಜನಗಳಿಂದ ಸಂತೋಷಗೊಳಿಸಬೇಕು.

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ಬಸವಳಿಸದೆ ಪಳಿಯದೆ ಭಂಗವಡಿಸದೆ
ಹಸಗೆಡಿಸದೆ ಹದುಗಿಸದೆ
ಬಸಿರೊಳು ಬಂದ ಪೆಣ್ಮಕ್ಕಳ ಮರುಕವ
ಸೊಸೆಯರೆಡೆಯೊಳಿಸಗುವುದು.

ಸೊಸೆಯ ಹೊಟ್ಟೆಯ ಹಾಳತವನ್ನರಿತು ಉಣಬಡಿಸುವುದರಲ್ಲಿ, ಉಡಿಗೆ ತೊಡಿಗೆಗಳ ವಿಷಯದಲ್ಲಿ, ಬಸಿರಿಯಾದವಳನ್ನು ನೋಡಿಕೊಳ್ಳುವ ಅಂಶದಲ್ಲಿ ಅತ್ತೆಯಾದವಳು ಯಾವ ವಿಧವಾದ ಕಾರ್ಪಣ್ಯವನ್ನೂ ತೋರಿಸಬಾರದು. ಸಮಯ ಬಿದ್ದಾಗ ಅತ್ತೆ ಸೊಸೆಗೆ ಬುದ್ಧಿ ಹೇಳಲೂ ಹಿಂಜರಿಯಬಾರದು.

ಸೊಸೆಯಾದವಳು ಅತ್ತೆ ಮಾವಂದಿರ ವಿಶ್ವಾಸವನ್ನು ದುರುಪಯೋಗಪಡಿಸಿಕೊಳ್ಳಬಾರದು. ಮಹಿಳೆಯರ ಸ್ಥಾನ ಮನೆಯಲ್ಲಿಯೆಂಬುದನ್ನು ಹೆಂಗಸಾದವಳು ಅರಿತು ಮನೆಯನ್ನು ಒಪ್ಪವಿಡುವುದರಲ್ಲಿಯೂ, ಮಕ್ಕಳಿಗೆ ಬುದ್ಧಿ ಕಲಿಸಿ ಅವರನ್ನು ಸನ್ಮಾರ್ಗದಲ್ಲಿ ನಡೆಯುವಂತೆ ಮಾಡುವುದರಲ್ಲಿ ತನ್ನ ಕಾಲವನ್ನು ವಿನಿಯೋಗಿಸಬೇಕು. ಪರಪುರುಷರನ್ನು ನೋಡುವುದು ಅವರಿಗೆ ಸಲ್ಲದು.

ಬಸಿರೊಳು ಬಂದ ಕುವರನಾದೊಡಮೇನು
ಪೊಸವರೆಯದ ಪುರುಷನನು
ಒಸೆದು ನಿಟ್ಟಿಸಿಯೊಡಲೋಜೆಯೊಳ್ಪುಗಳ ಬ
ಣ್ಣಿಸಲಾಗದು ಭಾವೆಯರು.
ಗುರು ಪಿರಿಯನು ತಂದೆ ಸೋದರನಣುಗನು
ಪೊರೆವರಸಾದೊಡಮೇನು
ಬರಿಸ ಪನ್ನೆರಡಾದ ಬಳಿಕಾರೊಳಮೊಂದು
ನೆರಸದೆ ಪೆರದೆಗೆದಿಹುದು.

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ಅತಿಥಿಗಳನ್ನು ಆದರಿಸುವುದರಲ್ಲಿ, ಆಳುಮಕ್ಕಳನ್ನು ನೋಡಿಕೊಳ್ಳುವುದರಲ್ಲಿ, ದುಷ್ಟರಲ್ಲಿ, ಬಸವಿ ಪಾತಕಿ ಅಸತಿ ಮಾಲೆಗಾತಿ ಸೂಳೆ ಸೂಲಗಿತ್ತಿ ಇವರೊಡನೆ ಬೆರಸದಿರುವಲ್ಲಿ ಗರತಿಯಾದವಳು ಎಚ್ಚರವಹಿಸಬೇಕು. ಅವರೊಡನೆ ಆಲೋಚನೆ ಮಾಡುವುದಾಗಲೀ ಅವರನ್ನು ಅಂತರಂಗಕ್ಕೆ ತೆಗೆದುಕೊಳ್ಳುವುದಾಗಲೀ ತರವಲ್ಲ. ಮೇಲೆ ಹೇಳಿದ ರೀತಿಯಲ್ಲೇ ಏಕಪತ್ನಿಯರು ನಡೆಯಬೇಕು; ಇದೇ ನಾರಾಯಣನ ಆಜ್ಞೆ.

ಹೆಣ್ಣಿನ ವಿಷಯದಲ್ಲಿ ಹೊನ್ನಮ್ಮನಿಗೆ ಅಪಾರವಾದ ಪ್ರೇಮ ಕರುಣೆಗಳಿವೆ. ಹೆಣ್ಣು ನಮ್ಮ ಪ್ರೇಮಗೌರವಗಳಿಗೆ ವಸ್ತು ಎಂಬುದನ್ನು ಹೊನ್ನಮ್ಮ ತನ್ನ ಗ್ರಂಥದ ಐದನೆಯ ಸಂಧಿಯಲ್ಲಿ ವಿವರಿಸಿದ್ದಾಳೆ.

ಹೆಣ್ಣು ಹೆತ್ತವರ ಬಳಗ ಬೇಗ ಹೆಚ್ಚುತ್ತದೆ. ಅಲ್ಲದೆ ಅವರಿಗೂ ಕೀರ್ತಿಬರುತ್ತದೆ ಲಕ್ಷ್ಮಿಯಿಂದ ಹಾಲ್ಗಡಲು, ಪಾರ್ವತಿಯಿಂದ ಹಿಮವಂತ, ಸೀತೆಯಿಂದ ಜನಕ—ಇವರು ಪ್ರಸಿದ್ಧಿಗೆ ಬರಲಿಲ್ಲವೆ? ಗಂಡು ಹುಟ್ಟಿದರೆ ವಂಶಕ್ಕೆ ಬಂದ ಕೋಡೇನು ಎಂದು ಹೊನ್ನಮ್ಮನು ಕೇಳುವ ಪ್ರಶ್ನೆ ನ್ಯಾಯವಾಗಿಯೇ ಇದೆ.

> ಪೆಣ್ಣಲ್ಲವೆ ತಮ್ಮನೆಲ್ಲ ಪಡೆದ ತಾಯಿ
>   ಪೆಣ್ಣಲ್ಲವೆ ಪೊರೆದವಳು
> ಪೆಣ್ಣು ಪೆಣ್ಣೆಂದೇತಕೆ ಬೀಳುಗಳೆವರು
>   ಕಣ್ಣು ಕಾಣದ ಗಾವಿಲರು.
> ಕುವರನಾದೊಡೆ ಬಂದ ಗುಣವೇನದರಿಂದ
>   ಕುವರಿಯಾದೊಡೆ ಕುಂದೇನು

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ಇವರೀರ್ವರೊಳೇಳ್ಗೆವಡೆದವರಿಂದ
ಸವನಿಪುದಿಹಪರಸೌಖ್ಯ.
ಕುಲಪುತ್ರನೋದಿ ತಿಳಿದು ನಡೆದಲ್ಲದೆ
ಕುಲವನುದ್ಧರಿಸಲರಿಯನು
ಕುಲಪುತ್ರಿಯೊಳ್ಗುವರನಿಗಿತ್ತ ಮಾತ್ರಕೆ
ಕುಲಕೋಟಿಯನುದ್ಧರಿಪಳು.

ತಂದೆತಾಯಿಗಳ, ಬಂಧುಬಾಂಧವರ ವಿಷಯದಲ್ಲಿ ಗಂಡು ಮಕ್ಕಳಂತೆ ಇವರೇನು ಆಸ್ತಿಗೆ ಹೋರಾಡುವರೆ? ಆದ್ದರಿಂದ ತಂದೆತಾಯಿಗಳಾದವರು ಹೆಣ್ಣುಮಕ್ಕಳಿಗೆ ಒಡವೆವಸ್ತುಗಳನ್ನು ಕೊಡುವ ವಿಷಯದಲ್ಲಿ, ಅವರನ್ನು ಮದುವೆಮಾಡಿಕೊಡುವ ವಿಷಯದಲ್ಲಿ ಯುಕ್ತಾಯುಕ್ತವಾದ ವಿವೇಚನೆಯನ್ನು ತೋರ ಬೇಕು. ಸುಗುಣನೂ ಸುಚರಿತ್ರನೂ ಸುಂದರನೂ ಸದ್ವಂಶ ದಲ್ಲಿ ಹುಟ್ಟಿದವನೂ ಆದವನಿಗೇ ಹೆಣ್ಣನ್ನು ಕೊಡಬೇಕಲ್ಲದೆ ಹಣದಾಸೆ, ನಂಟುತನ, ಸ್ನೇಹಗಳಿಂದ 'ಗುಣ ಜವ್ವನ ಕುಲ ರೂಪುಗುಂದಿದ ನಡೆವೆಣಕೀಯಲಾಗದು ಹೆಣ್ಣ' ಅದಕ್ಕೆ ಪ್ರತಿಯಾಗಿ ಯಾವ ಗುಣವೂ ಇಲ್ಲದೆ ಬಡತನ ಆವರಿಸಿದ 'ಬೀಳುಗುವರನಿಗೆ ಬೆಲೆಗೈದರೆಂಬುದ ಕೇಳಿ ಕಿವಿಯ ಮುಚ್ಚು ವುದು.' ಇತರರಂತೆ ತಾವೂ ಬದುಕಿ ಬಾಳಬೇಕೆಂಬ ಆಸೆ ಹೆಣ್ಣುಮಕ್ಕಳಿಗಿರುವುದಿಲ್ಲವೆ?

ಹೆಣ್ಣು ಮಕ್ಕಳಿಗೆ ತೌರೆಂದರೆ ತುಂಬ ಆಸೆ; ತೌರಿಂದ ತಂದ ಪದಾರ್ಥಗಳೆಂದರೆ ತುಂಬ ಹೆಮ್ಮೆ. ಹೀಗಿರುವಲ್ಲಿ 'ತನ್ನ ತವರು ಮನೆಯವರಿತ್ತ ಪಿತ್ತಳೆ ಪೊನ್ನೆಂದು ಬಗೆದು ಪೂಜಿಸುವ' ಹೆಣ್ಮಕ್ಕಳಿಗೆ ಚಿನ್ನರನ್ನಗಳನ್ನು ಕೊಟ್ಟು ಆದರಿಸಬೇಕು. ಇದನ್ನು ವ್ರತದಂತೆ ಆಚರಿಸುವ ನೇಮಗಾರರಿಗೆ ಷೋಡಶ

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ದಾನದ ಫಲ ಸುಲಭವಾಗಿ ಕೈಗೂಡುವುದಂತೆ! ಇಷ್ಟೇ ಅಲ್ಲ; ಹೆಣ್ಣು ಮಕ್ಕಳ ಕ್ಷೇಮಸಮಾಚಾರಗಳನ್ನು ತಂದೆತಾಯಿಗಳು ಆಗಾಗ ವಿಚಾರಿಸಿ, ಹಬ್ಬಹರಿದಿನಗಳಲ್ಲಿ, ಮದುವೆ ಮುಂಜಿಗಳ ಸಂದರ್ಭಗಳಲ್ಲಿ ಅವರನ್ನು ತೌರಿಗೆ ಕರೆಯಿಸಿಕೊಳ್ಳಬೇಕು. ಆದರೆ ಈ ವಿಷಯದಲ್ಲಿ ಒಂದು ಎಚ್ಚರಿಕೆ. ಹೆಣ್ಣುಮಕ್ಕಳನ್ನು ತಂದೆತಾಯಿಗಳು ಹೆಚ್ಚಿಸದೆ, ಅವಿವೇಕದಿಂದ ತನ್ನ ಗಂಡನ ಮಾತನ್ನು ಕೇಳದಂತೆ ನಡೆಯದ ಹಾಗೆ ನೋಡಿಕೊಳ್ಳಬೇಕು. ಮುಖ್ಯವಾಗಿ

ಪೆತ್ತ ಪೆಣ್ಮಗಳ ಪೆರ್ಚಿಸಿ ಮೈಮರೆದು
ಸ್ಮತ್ತೆಯಪ್ಪಂತೆ ಮನ್ನಿಸದೆ
ಸುತ್ತುಗೆಲಸವ ಕಲಿಸಿ ಗೈಸುವುದೊಡ
ನೊತ್ತಿ ನುಡಿವುದುಚಿತವನು

ಹೆಣ್ಣು ಮಕ್ಕಳು ಗಂಡನ ಮನೆಯಲ್ಲಿ ನಡೆದುಕೊಳ್ಳಬೇಕಾದ ರೀತಿಯನ್ನು ಹೊನ್ನಮ್ಮನು ಹೃದಯಂಗಮವಾಗಿ ವರ್ಣಿಸಿದ್ದಾಳೆ. ಈ ಸಂದರ್ಭ ಗಂಡನ ಮನೆಗೆ ಹೊರಟು ನಿಂತ ಶಕುಂತಳೆಗೆ ಕಣ್ವರು ಮಾಡಿದ ಉಪದೇಶವನ್ನು ನೆನಪಿಗೆ ತರುತ್ತದೆ. 'ಶುಶ್ರೂಷಸ್ವ ಗುರೂನ್' ಎಂಬ ಪದ್ಯದ ವಿಸ್ತಾರವಾದ ರೂಪವೇ ಇದು.

ಆರನೆಯ ಸಂಧಿಯಲ್ಲಿ ಅನ್ಯೋನ್ಯ ದಾಂಪತ್ಯದಿಂದಲೇ 'ಸಂಸಾರದ ಸುಖದ ಸುಗ್ಗಿ', ವಿರಸ ದಾಂಪತ್ಯದಿಂದ ಸಂಸಾರ ನಾಶ ಎಂಬ ಅಂಶವನ್ನು ಹೊನ್ನಮ್ಮನು ವಿಶದಪಡಿಸಿದ್ದಾಳೆ.

ಎರವೆಳ್ಳಿಸಿತಿಲ್ಲದೊರ್ವರೊರ್ವರೊಳೊಡ
ವೆರೆದಿರ್ದ ಸತಿಪತಿಗಳಿಗೆ
ದೊರೆಕೊಂಬುದು ಸಂಸಾರ ಸುಖದ ಸುಗ್ಗಿ
ಪರಮೋಳಾನಂದ ಪರ್ಬುವುದು

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ಪ್ರತಿನಿತ್ಯವೂ ತಮ್ಮತಮ್ಮಲ್ಲಿಯೇ ಕಾದಾಡುವ ದಂಪತಿಗಳಿಂದ ಯಾರಿಗೆ ತಾನೆ ಸೌಖ್ಯವುಂಟು? ವಿವೇಕಿಗಳು ಅವರನ್ನು ಹತ್ತಿರ ಸೇರಿಸರು. ಹೊಟ್ಟೆಯಲ್ಲಿ ಹುಟ್ಟಿದ ಮಕ್ಕಳು ಇಂಥ ತಂದೆತಾಯಿಗಳನ್ನು ಅಲ್ಲಗಳೆಯುವರು. ವಂಶದ ಕೀರ್ತಿ ಮಾಲಿನ್ಯಹೊಂದುತ್ತದೆ. ಹೋಗಲಿ; ಇವರಿಗಾದರೂ ಸುಖವುಂಟೇ? ಛೇ, ಎಂದಿಗೂ ಇಲ್ಲ. ಊಟ ನಿದ್ದೆಗಳಲ್ಲಿ ಸುಖವಿಲ್ಲದೆ ಕೋಟಲೆಗೊಳ್ಳುವುದೇ ಇವರ ಪಾಡು. ಕಡುಮೂರ್ಖರಾಗಿ, ಒಬ್ಬರನ್ನೊಬ್ಬರು ಕಡೆಗಣಿಸಿ, ಬಿರುಮಾತುಗಳನ್ನಾಡಿ 'ಬಿಡದೆ ಕಾದುವ ಗಂಡಪೆಂಡಿರನೇತಕೆ ಪಡೆದನಕಟ ಪದ್ಮಭವನು' ಈ ತೆರನಾದ ಗರ್ವಿತ ದಂಪತಿಗಳನ್ನು ಭೂಮಿ ನುಂಗಬೇಕು. ಆದರೆ ನುಂಗುವುದಿಲ್ಲ. ಆದ್ದರಿಂದಲೇ ಭೂಮಿಗೆ 'ಸರ್ವಂ ಸಹೆ' ಎಂದು ಹೆಸರಿರುವುದು.

ಹೊನ್ನಮ್ಮ ಈ ಗ್ರಂಥವನ್ನು ಹೆಣ್ಣಿನ ದೃಷ್ಟಿಯಿಂದಲೇ ರಚಿಸಿದ್ದರೂ ಹೆಣ್ಣು ಅರ್ಧಾಂಗಿ, ಸಹಧರ್ಮಚಾರಿಣಿ, ಗಂಡನಿಂದ ಆಕೆಗೂ ಧರ್ಮಬೇಕಾದುದು ಸಹಜವಾದುದು ಎಂಬ ಅಂಶವನ್ನು ಎಲ್ಲಿಯೂ ಮರೆಮಾಚಿಲ್ಲ. ಅಪರಿಚಿತವಾದ ಆವರಣ, ಜನಕ್ಕೆ ಹೆಣ್ಣು ಹೊಂದಿಕೊಂಡು ನಡೆಯಬೇಕಾದ ವಿಷಯ ಸಾಮಾನ್ಯವಾದುದಲ್ಲ. ಹೆಣ್ಣಿನ ಮನಸ್ಸು ಸಹಜ ಕೋಮಲವಾದುದು. ಅದಕ್ಕೆ ಗಂಡಿನ ಸಹಾನುಭೂತಿ ದೊರೆತರೇ ಅರಳೀತು, ಇಲ್ಲವಾದರೆ ಬಾಡೀತು. ಹೆಣ್ಣು ಮೂರ್ಖಳಂತೆ ವರ್ತಿಸಬಹುದು. ಆದರೆ ಆಕೆಯ ಮೂರ್ಖತನವನ್ನು ಬಿಡಿಸಿ ಒಲಿಸಿಕೊಳ್ಳುವುದು ಗಂಡಿನ ಕೆಲಸ.

ಒಲುಮೆಯನೊಳಗೊಂಡು ನಾಣ್ಚಿಯೊಲಿಯದಂತೆ
ಚಲಪೋರುವೆಳಜವ್ವನದ

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ಕುಲಸತಿಯೊಳು ಕೋಪಿಸದೆ ಕೋಟಲೆಗೊಳ
ದಲಸದೆಯನುಸರಿಸುವುದು.
ನಲ್ಲನಿಗೊಲಿದು ನಾಣ್ಚುವ ಮುದ್ದುವೆಣ್ಣಿನ
ಮೆಲ್ಲೆರ್ದೆ ಕಲ್ಲೆರ್ದೆಯೆನಿಸೆ
ಬಲ್ಲವನವಳ ಬಲುಮೆ ಗೈದು ಬಳಲದೆ
ಚಲ್ಲವಾಡುವುದು ಜಾಣ್ಮೆಯೊಳು.
ನಿಟ್ಟಿಸೆ ತಲೆವಾಗುವ ನೇಹದೊಳು ಮನ
ಮುಟ್ಟ ಮರಳಿ ನಿಟ್ಟಿಸುವ
ದಿಟ್ಟದಿಟ್ಟಿಗಳೊಡವೆರೆಯೆ ನಾಣ್ಚುವರೊಳ
ಗುಟ್ಟರಿತುಪಚರಿಸುವುದು.

ಹೊಸ ಆವರಣ, ರೂಪುಯೌವನಗಳಿಂದ ಕೂಡಿದ ಕಾಲ, ಜೊತೆಗೆ ಅನುಭವ ಸಾಲದಾಗಿ ವಿವೇಕ ಅಷ್ಟಾಗಿ ಇಲ್ಲದ ಹೆಣ್ಣಿನ ವಿಷಯದಲ್ಲಿ ಪ್ರೇಮ ಕನಿಕರಗಳಲ್ಲದೆ ಒರಟುತನವನ್ನಲ್ಲ ಗಂಡು ತೋರಬೇಕಾದ್ದು. ಗಂಡನ ಪ್ರೇಮವನ್ನು ಸಂಪಾದಿಸಬೇಕೆಂಬ ಆತುರ ಆಸೆ ಹೆಣ್ಣಿನಲ್ಲಿರುವುದು ಸಹಜವಾದದ್ದೇ. ಆದರೆ ಈ ಆಸೆಯನ್ನು ಪೂರ್ತಿಗೊಳಿಸಿಕೊಳ್ಳುವುದಕ್ಕೆ ನಾಚಿಕೆ ಅಡ್ಡಿಬರುತ್ತದೆ. ಈ ಸಂದರ್ಭಗಳಲ್ಲಿ ಮುಗ್ಧಳಾದ ಹೆಣ್ಣನ್ನು ಗಾಬರಿಗೊಳಿಸದೆ, ಬಲಾತ್ಕರಿಸದೆ, ಅವಳ ಮನಸ್ಸನ್ನು ಕಣ್ಣಿನ ಇಂಗಿತದ ಮೂಲಕ ಅರಿತು ಗಂಡು ನಡೆಯಬೇಕು. ಈ ರೀತಿಯಲ್ಲಿ ಹೆಣ್ಣನ್ನು ವಶಪಡಿಸಿಕೊಳ್ಳಲಾರದೆ ಬಲಾತ್ಕಾರವನ್ನು ಅವಳ ವಿಷಯದಲ್ಲಿ ತೋರಿದರೆ 'ಪೊಸಪೂವ ಸರಗೈದು ಮುಡಿಯದೆ ನಲುಗಿಸಿ ರಸದೆಗೆವೆಸಕವೆನಿಸುವುದು'

ಮುಗುದೆ ನಾಚಿಕೆಗೊಳೆ ಮುದ್ದಿಸಿ ತಿಳುಪದೆ
ಪಗೆ ಸಾಧಿಸಿ ಬಲ್ಮೆದೋರೆ

Jangamwadi Math, VARANASI.
CC0. In Public Domain. Jangamwadi Math Collection, Varanasi
Acc. No. 1266

Digitization by eGangotri and Sarayu Trust. Funding by MoE-IKS

ಉಗುರೊಳು ಬಾಜಿಪ ಬೀಣೆಗೊನಕೆಗೊಂಬ
ಬಗೆಯೆನಿಪುದು ಭಾವಿಪೊಡೆ
ಎರಗಿ ಎರಗದೆಳವೆಣ್ಣನೆರಗಿಸದೆ
ಬಱಿದೆ ಮುನಿದು ಬಲ್ಮೆದೋಱೆ
ಎಱೆವ ತಣ್ಣೀರನೆಳಸುವೆಳೆವಳ್ಳಿಗೆ
ತಳಿರಗೆಂಡವ ತಳಿವಂತೆ.

ಹೆಣ್ಣು ಕನಿಕರಕ್ಕೆ ಪ್ರೇಮಕ್ಕೆ ಯೋಗ್ಯಳು ಎಂದ ಮಾತ್ರಕ್ಕೆ ತರತಮ ಭಾವವನ್ನು ಅರಿಯದೆ ಪ್ರೀತಿಸಬೇಕೆಂದಲ್ಲ. ಹಾಗೆ ವಿವೇಚನೆ ಇಲ್ಲದೆ ಹೆಣ್ಣಿನಲ್ಲಿ ಅತಿಶಯವಾದ ಪ್ರೇಮವನ್ನು ಯಾವ ಪುರುಷನು ತೋರುವನೋ, ಅದೇ ಹೆಣ್ಣು ಇವನನ್ನು ಅವಮಾನಗೊಳಿಸುವಳು. ಆದ್ದರಿಂದ ಗಂಡ ಹೆಂಡಿರ ಪ್ರೇಮ ಮೆಟ್ಟಲು ಮೆಟ್ಟಲಾಗಿ ಬೆಳೆದು, ಸಂಸಾರದ ಸುಖದುಃಖಗಳಲ್ಲಿ ಇಬ್ಬರೂ ಸಮಭಾಗಿಯಾಗಿ ಹೆಣ್ಣು ಗಂಡಿನ ಮನಸ್ಸಿನ ರಾಣಿ, ಮನೆಯ ಒಡತಿ, ಆರಾಧ್ಯ ದೇವತೆಯಾಗಿ ಪರಿಣಮಿಸಬೇಕು. ಆಗಲೇ ದಾಂಪತ್ಯಕ್ಕೆ ಸಾರ್ಥಕತೆ.

ಮನದೊಳು ಮನ ನೆನಹಿನೊಳು ನೆನಹು ಮತ್ತೆ
ತನು ತನುವಿನೊಳೊಡವೆರಸಿ
ಅನುಗೊಳೆ ಪಾಲು ನೀರುಗಳಂತಿನಿಯನು
ಮಿನಿಯಳುಮೇಕವೆನಿಪುದು.
ಎಣಿಕೆ ಗೈವೊಡೆ ರೂಪು ಜವ್ವನಮಿದ್ದೇನು
ಗುಣಮಿಲ್ಲದ ಕುಲಸತಿಗೆ
ಗುಣಕರುಗೊಂಡಿರೆ ಕೊರ್ತೆಂದೆಂದಿಗು
ಮೆಣೆ ಬಿಜ್ಜದೇಕವೆನಿಪುದು.

ಗಂಡನು ದೂರದೇಶಕ್ಕೆ ಪ್ರಯಾಣ ಮಾಡಿದಾಗ, ಆ ವಿರಹ ಕಾಲದಲ್ಲಿ ಸಾಧ್ವಿಯಾದವಳ ಚರಿತ್ರೆ ಹೇಗಿರಬೇಕೆಂಬುದು

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ಏಳನೆಯ ಸಂಧಿಯ ವಿಷಯ. ಸೋಗೆ ಮುಗಿಲನ್ನೂ, ಕಮಲ ಸೂರ್ಯನನ್ನೂ, ಸಾಗರ ಚಂದ್ರನನ್ನೂ ಕೋಗಿಲೆ ಸುಗ್ಗಿಯನ್ನೂ ಹಾರೈಸುವಂತೆ ನೆರೆಯೂರಿಗೆ ಹೋದ ಇನಿಯನ ಬರವನ್ನು ಸತಿಯಾದವಳು ಹಾರೈಸುತ್ತಾಳೆ. ವಿರಹ ಕಾಲದಲ್ಲಿ ಅವಳಿಗೆ ಅವನದೇ ನೆನಪು; ಅವನಿಲ್ಲದ ಮನೆ ಅವಳಿಗೆ ಬಿಮ್ಮೆನಿಸುತ್ತದೆ.

ದೇವರಿಲ್ಲದ ದೇಗುಲದ ಚಿತ್ತರದಂತೆ
ಭೂವರನಿಲ್ಲದೂರಂತೆ
ಜೀವಿತೇಶ್ವರನ ವಿರಹದೊಳು ಸೆಜ್ಜೆಯ
ಭಾವಿಸಿ ಬಣ್ಣಗುಂದುವಳು.

ತನ್ನನ್ನು ಸಂತೈಸಲು ಕೆಳದಿಯರಿದ್ದರೂ ಯಾವುದೋ ನೆಪದಿಂದ ಅವರನ್ನು ಕಳುಹಿ, ಏಕಾಂತದಲ್ಲಿ ತನ್ನ ಇನಿಯನನ್ನು ನೆನೆಯುವುದೇ ಸಾಧ್ವಿಯಾದವಳ ಕೆಲಸ. ಗಂಡನು ಊರಿನಲ್ಲಿಲ್ಲದಾಗ ಉಡುಗೆ ತೊಡಿಗೆಗಳಾಗಲೀ, ಪರಿಮಳಗಳಾಗಲೀ ಆಕೆಗೆ ಸೊಗಸನ್ನು ತಾರವು. ಅನ್ನಪಾನಾದಿಗಳ ವಿಷಯದಲ್ಲಿಯೂ ಆಕೆಯ ವರ್ತನೆ ಹಾಗೆಯೇ. ವಿರಹಿಣಿಯಾದ ಸಾಧ್ವಿಯ ಮೈಮೇಲೆ ಅಲಂಕಾರಗಳಿದ್ದರೆ ಅವು ಆಕೆಯ ಸೌಮಂಗಲ್ಯ ಸೂಚನೆಗಾಗಿಯೇ. ಹೀಗೆ ಗಂಡನ ನೆನಹನ್ನೇ ವಿರಹವ್ರತವಾಗಿ ತೊಟ್ಟ ಸತಿಯೇ ಮಹೋನ್ನತಳು.

ಎನ್ನಿನಿಯನ ಪಾದಸೇವೆಯಿಲ್ಲದೆ ನಾ
ನೆನ್ನೆಗನುಂಕಿರ್ಪೆನೆಂದು
ತನ್ನೊಳು ತಾನೆ ತವಕಗೊಂಬ ಸತಿಯ ಮು
ಹೋನ್ನತಿಗಿನ್ನೆಣೆಯುಂಟೆ.

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ಸ್ತ್ರೀಯರಿಗೆ ಈ ವಿರಹವ್ರತದ ಮುಂದೆ ಮಿಕ್ಕ ತಪಸ್ಸುಗಳಾಗಲೀ ವ್ರತನಿಯಮಗಳಾಗಲೀ ಸಮನೆನಿಸಲಾರವು. ತನ್ನನ್ನು ಬಹುಕಾಲ ಅಗಲಿ ಬಹಳದೂರ ಹೋಗಿರುವ ಇನಿಯನು ಬರುವ ದಿನ ಹತ್ತಿರವಾಗುತ್ತಲೇ

ಇಂದಿನೊಳೀಗಲೆನ್ನಿನಿಯನೈತರಬೇ
  ಕೆಂದು ಕದುಬಿ ಕಾತರಿಸಿ
ಮಿಂದು ಮಡಿಯನುಟ್ಟು ಮನೆಯ ದೇವರ ಬಲ
  ವಂದು ನೋಂಪಿಯ ನೋಸುವಳು
ಅತ್ತಣ ದೆಸೆಯಿಂದ ಬೀಸುವೆಲರನೆಲ
  ರೊತ್ತಿಸೊಳೆಸೆವ ಸೌಸವವ
ಸುತ್ತಿ ಸೌಸವವ ತುತ್ತುವ ತುಂಬಿಯ ಬೆಂ
  ಬತ್ತಿ ಕೇಳುವಳವನಿರವ.

ಸಾಧ್ವಿಯ ವಿರಹದ ವ್ರತ ಫಲಿಸಿತೆಂಬಂತೆ 'ಇನ್ನೇನು ನಿನ್ನ ಇನಿಯನು ಬಂದನು' ಎಂಬುದನ್ನು ಆಲಿಸಿ ಈಕೆಯ ಮುಖ ಅರಳುತ್ತದೆ. ಮನೆಯ ತಲೆವಾಗಿಲನ್ನು ತೆರೆಯುತ್ತಾಳೆ. ಅವನ ಸೇವೆಗೆ ಬೇಕಾಗುವುದನ್ನು ಸಿದ್ಧಗೊಳಿಸುತ್ತಾಳೆ. ಆಕೆ ತನ್ನ ಇನಿಯನನ್ನು ಇದಿರುಗೊಳ್ಳುವ ರೀತಿಯಾದರೂ ಹೇಗೆ?– ಮುಂದುವರಿಯುವ ನೋಟದಿಂದ, ತುಂಬಿದ ಹರ್ಷಾಶ್ರುವಿನಿಂದ, ಮೈನವಿರಿನಿಂದ. ಹುಟ್ಟನಿಂದ ಹಣವನ್ನೇ ಕಾಣದವರು ನಿಧಿಯನ್ನು ನೋಡುವಂತೆ ಮೈಮರೆತು ಈಕೆ ತನ್ನ ಇನಿಯನನ್ನು ನಿಟ್ಟಿಸುತ್ತಾಳೆ; ನಮಸ್ಕರಿಸುತ್ತಾಳೆ; ಅವನನ್ನು ಪೂಜಿಸುತ್ತಾಳೆ. ಕಾಣದ ದೇಶದಲ್ಲಿ ತೊಳಲಿ ತನ್ನ ಇನಿಯನು ಎಷ್ಟು ಕಷ್ಟಪಟ್ಟನೋ! ತನ್ನಗಂಡನ ಪ್ರಯಾಣ ಕಾಲದ ಕಷ್ಟಸುಖದ ಚರಿತ್ರೆಯನ್ನು ಈಕೆ ಕೇಳುತ್ತಾಳೆ; ಕೇಳಿ ಅವನನ್ನು ಸಂತೈಸುತ್ತಾಳೆ.

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ಎರವಿನಿತಿಲ್ಲದೆಂದಿನ ನೇಹದೊಳೊಡ
ವೆರಸುವಳೆದೆಗರಗುವಳು
ಪರಿಪರಿಯೂಳಿಗವನು ಪಣ್ಣಿ ತಣಿವಳು
ಪರಮಾನಂದವಡುವಳು.

ಉತ್ತಮ ಗೃಹಿಣಿಯ ಗೃಹಚರ್ಯೆಯನ್ನು ಎಂಟನೆಯ ಸಂಧಿ ವಿಸ್ತರಿಸುತ್ತದೆ. ಅದನ್ನು ಈ ರೀತಿಯಲ್ಲಿ ಸಂಗ್ರಹಿಸ ಬಹುದು. ಸಾಧ್ವಿಯಾದವಳು ಅರುಣೋದಯದ ಸಮಯಕ್ಕೆ ಸರಿಯಾಗಿ ಎದ್ದು ಹರಿಗುರುಚರಣಗಳಿಗೆ ನಮಸ್ಕರಿಸಬೇಕು. ಆ ಬಳಿಕ ತನ್ನ ಗಂಡನು ಎಚ್ಚರಗೊಳ್ಳುವವರೆಗೆ ಕಾದಿರಬೇಕಾದುದು ಅವಳ ಕರ್ತವ್ಯ. ಹಾಗೆ ಕಾದಿದ್ದು ಪ್ರಸನ್ನ ಮುಖದಿಂದ ಗಂಡನನ್ನು ಸಂತೋಷಗೊಳಿಸಿ 'ನಿದ್ದೆಯೊಳೆಸಗಿದ ನಿಖಿಲಾಪಚಾರವ ತಿದ್ದುವುದಿನಿವಾತಿನೊಳು.'

ಮನೆಗೆಲಸವೆಂದರೇನು ಸಾಮಾನ್ಯವೇನು ? ಅವುಗಳು ನೂರಾರು. ಕರು ತುರುಗಳನ್ನು ಕಾಪಿಡಬೇಕು. ಕೌಶಲದಿಂದ ಹಾಲನ್ನು ಕರೆದು ಕಾಯಿಸಬೇಕು. ದೇವರಿಗೆ, ಅತ್ತೆಮಾವಂದಿರಿಗೆ ಮಣಿದು, ಇನ್ನೂ ಬುದ್ಧಿಗಲಿಯುತ್ತಿರುವ ಸೊಸೆ ಮತ್ತು ಹೆಣ್ಣುಮಕ್ಕಳಿಗೆ ಸರಿಯಾದ ದಾರಿತೋರಬೇಕು. ಮಕ್ಕಳ ಶೀಲ ಬೆಳೆಯಲು ಬಾಲ್ಯವೇ ತಳಹದಿ. ಆದ್ದರಿಂದ ಅವರಿಗೆ ಕಳವು ಕಪಟಗಳು ಬೆಳೆಯದಂತೆ, ಶೀಲಶುದ್ಧಿ ಒದಗುವಂತೆ ನೋಡಿಕೊಳ್ಳಬೇಕಾದುದು ಗೃಹಿಣಿಯ ಕೆಲಸ. ಗಂಡ ಸಂಪಾದಿಸಿ ತಂದ ಧಾನ್ಯಗಳನ್ನು ಹಸಗೆಡದಂತೆ, ಹಕ್ಕಿಗಳು ಕುಟುಕದಂತೆ, ಹಸುಗಳು ಬಾಯಿಡದಂತೆ ನೋಡಿಕೊಂಡು, ಅವನ್ನು ಸ್ವಚ್ಛಗೊಳಿಸಿ ದೇವರ ನೈವೇದ್ಯಕ್ಕೆ ಸಿದ್ಧಗೊಳಿಸಬೇಕು. ಏಕೆಂದರೆ ಈ ರೀತಿಯಾದ ವಿತರಣೆ, ಸ್ವಚ್ಛತೆ ಬಾಳಿಗೆ ಅತ್ಯಾವಶ್ಯಕ.

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ಆಚಾರದಿಂದನುಪಮಧರ್ಮದೇಳಿಗೆ
ಆಚಾರದಿಂದಾಯುಷ್ಯ
ಆಚಾರದಿಂದಿಹಪರವದರಿಂದ ಸ
ದಾಚಾರವತಿಯೆನಿಸುವುದು.

ಆಚಾರಕ್ಕೆ ಮೂಲ ಸ್ನಾನ. ಆದ್ದರಿಂದ ಸ್ತ್ರೀಯರು ಮಂಡೆಯುಳಿದು ತಣ್ಣೀರಿನಲ್ಲಿ ಸ್ನಾನಮಾಡಬೇಕು. ಚಳಿಯನ್ನು ಸೈರಿಸಲಾರದವರು ಬಿಸಿನೀರಿನಲ್ಲಿ ಸ್ನಾನ ಮಾಡಬಹುದು. ರೋಗಿಗಳಿಗೂ ಬಡಮಯ್ಯ ಭಾವೆಯುವರಿಗೂ ಕೈಕಾಲುಗಳನ್ನು ತೊಳೆದುಕೊಳ್ಳುವುದೇ ಸಾಕು. ಇದಲ್ಲದೆ ಆತ್ಮಶುದ್ಧಿಯ ಉಪಾಯ ಮತ್ತೊಂದು ಉಂಟು.

ನೀರೊಳು ಮಯ್ಯ ನೇಮದೊಳು ಕರಣಗಳ
ಭೂರಿಸತ್ವದೊಳು ಬುದ್ಧಿಯನು
ನಾರಾಯಣನಾಳುತನದೊಳಾತ್ಮನ ತೊಳೆ
ದೋರಂತೆ ಒಳ್ಪುವಡೆವುದು

ಸ್ನಾನವಾದ ಮೇಲೆ ದೇವತಾರ್ಚನೆಗೆ ಮತ್ತು ಪಾಕಕ್ಕೆ ಸಿದ್ಧತೆ. ಪಾಕವಾದರೋ ರುಚಿಶುಚಿಗಳಿಂದ ಕೂಡಿರಬೇಕು. ಮೈದೊಳೆಯದೆ ಮಡಿಯುಡದೆ ಇದ್ದ ಸ್ತ್ರೀಯರು ಮಾಡಿದ ಅಡಿಗೆಯನ್ನು 'ನಿವೇದಿಸಲಾಗದಚ್ಯುತಗೆ.' ಗಂಡನಿಗೆ, ಅತಿಥಿ ಅಭ್ಯಾಗತರಿಗೆ, ಯಾಚಕರಿಗೆ ಅನ್ನವಿಟ್ಟ ಮೇಲೆ ಗರತಿಯಾದವಳು ಊಟಮಾಡತಕ್ಕದ್ದು. ಭೋಜನೋತ್ತರ ಕಾಲವನ್ನು ರಾಮಾಯಣ ಭಾರತ ಭಾಗವತಗಳನ್ನು ಕೇಳಿದರೆ ಸ್ತ್ರೀಯರ ಶೀಲ ಬಣ್ಣವೇರುತ್ತದೆ. ಸ್ತ್ರೀಯರಿಗೆ ಶೀಲವೇ ಸೌಂದರ್ಯ.

ಸಜ್ಜುವಡೆಯೆ ಸೌಷ್ಟುತೆ ಸರ್ವಾಂಗದೊ
ಳುಜ್ಜುಗಗೊಳೆಯ್ದೊಡನೆ

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ಲಜ್ಜೆ ಬಿಂಬಿಸೆ ಲಾವಣ್ಯದೋಳೊಯ್ಯನೆ
ಪಜ್ಜೆಯಿಡುವುದು ಭಾವೆಯರು

ಹೆಚ್ಚೇನು ?

ತನ್ನೊಡಲಿಗೆ ತನ್ನ ಮನವ ಕಾಪಿಡುವುದು
ತನ್ನ ಮನಕೆ ತನ್ನ ಮತಿಯು
ತನ್ನ ಮತಿಗೆ ತನ್ನ ಸಾತ್ವಿಕ ಧೈರ್ಯವ
ನುನ್ನತಿವಡೆದೊಪ್ಪುವುದು

ಮನೆ ಎನ್ನುವುದು ಪವಿತ್ರವಾದ ಸಂಸ್ಥೆ. ಅದರ ಗುಟ್ಟನ್ನು ಕಾಪಾಡುವುದು ಗಂಡನಿಗಿಂತ ಹೆಂಡತಿಯದು ಹೆಚ್ಚಿನ ಹೊಣೆ. ತನ್ನ ಮನೆಯ ಬಡತನ ಸಿರಿತನಗಳನ್ನಾಗಲೀ, ತನ್ನಿನಿಯನ ತಪ್ಪುಗಳನ್ನಾಗಲೀ, ತನ್ನ ಮರವೆ ಮೋಸಗಳನ್ನಾಗಲೀ ಗೃಹಿಣಿಯಾದವಳು ಇತರರೊಡನೆ ಬಿನ್ನವಿಸಿಕೊಳ್ಳಕೂಡದು. ತೌರೂರು ಹತ್ತಿರವೇ ಇದೆಯೆಂದು ಆಗಾಗ ಅಲ್ಲಿಗೆ ಹೋಗಿ ಬರುವುದೂ ಸಲ್ಲದು. ಹಾಗೆಯೇ ಇತರರ ಗುಟ್ಟುಗಳನ್ನು ಅರಿತುಕೊಳ್ಳುವುದರಲ್ಲಾಗಲೀ, ಇತರರ ಆಲೋಚನೆಗಳಲ್ಲಿ ಭಾಗವಹಿಸುವುದರಲ್ಲಾಗಲೀ ಹೆಣ್ಣು ಆಸಕ್ತಿ ವಹಿಸಕೂಡದು. ದುಷ್ಟರೂ, ದಿಟ್ಟೆಯರೂ, ಚಂಡಿಯರೂ ಆದ ಹೆಣ್ಣುಗಳೊಡನೆ ಗರತಿಯಾದವಳು ಸ್ನೇಹ ಬೆಳಸದೆ, ಕಂಡ ಕಂಡ ಕಡೆಗೆ ಕಾಲನ್ನು ಬೆಳೆಸದೆ

ನೆನೆದೊಂದೊಂದನೆಡೆಯೊಳಿದ್ದಾಣ್ಮನ
ಮನವ ನೋಯಿಸಿ ಮರುಗಿಸದೆ
ಮನೆಗೆಲಸವನೆಲ್ಲವನಾರೈದು ಮ
ತ್ತಿನಿಯನ ಶಯ್ಯೆಗೇರುವುದು

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ಪಗಲಿರುಳೀ ಪರಿಯೊಳು ನಡೆದಿನಿಯನ
ಬಗೆಯ ತಿಳಿದು ಬಂದಿಗೊಂಬ
ಸುಗುಣೆಯರಿಪಪರದೊಳು ಸೂರೆಗೊಂಬರು
ಸೊಗದ ಸುಗ್ಗಿಯ ಸುಲಭದೊಳು

ಒಂಬತ್ತನೆಯ ಸಂಧಿ ಕೆಲವು ಸಾಮಾನ್ಯ ವಿಷಯಗಳನ್ನು ತಿಳಿಸುತ್ತದೆ. ಅಲ್ಲದೆ ಈ ಸಂಧಿಯಲ್ಲಿ ಹೊನ್ನಮ್ಮನು ತಾನು ಹೇಳುವ ಅಭಿಪ್ರಾಯಗಳಿಗೆ ಭಗವದ್ಗೀತೆ, ಭಾಗವತ, ರಾಮಾಯಣ, ವಿಷ್ಣುಪುರಾಣ, ಮಹಾಭಾರತಗಳಿಂದ ಶ್ಲೋಕಗಳನ್ನು ಉದ್ಧರಿಸಿ, ಅವುಗಳನ್ನು ಸಮರ್ಥಿಸುತ್ತಾಳೆ. ಒಳ್ಳೆಯತನವನ್ನು ಬೆಳೆಸಿಕೊಳ್ಳುವುದು ಮನುಷ್ಯನ ಧರ್ಮ. ಇದರಲ್ಲಿ ಅಹಿಂಸೆಗೆ ಹಿರಿದಾದ ಸ್ಥಾನವುಂಟು. ಈ ಒಳ್ಳೆಯತನ, ಸತ್ವಗುಣ ಸಾಧಿತವಾಗುವುದಾದರೂ ಹೇಗೆ? ಶ್ರೀವಿಷ್ಣುವಿನ ಸಂತತವಾದ ಆರಾಧನೆಯಿಂದ, ಹಿರಿಯರನ್ನು ಸತ್ಕರಿಸುವುದರಿಂದ, ನಿಷ್ಕಾಮ ಕರ್ಮವನ್ನು ಮಾಡುವುದರಿಂದ ಮನುಷ್ಯನಲ್ಲಿ ಈ ಸತ್ವಗುಣ ಸಿದ್ಧಿಯಾಗುತ್ತದೆ. ಅಂತರಂಗ ಶುದ್ಧಿಗೊಳ್ಳುತ್ತದೆ. ಭಗವದ್ಗೀತೆ ಮುಂತಾದ ಗ್ರಂಥಗಳು ಇದನ್ನೇ ಹೇಳುತ್ತವೆ; ದೇವತೆಗಳೂ ಅಂತರಂಗಶುದ್ಧಿಯನ್ನೇ ಒಲಿಯುತ್ತಾರೆ.

ಶುಚಿಯಾಗಿರೆ ದೇವತೆಗಳು ಸಲಹುವರು
ಶುಚಿಯನು ಪಿತೃಗಳೋವುವರು
ಶುಚಿಗಂಜುವುವು ಪ್ರೇತಭೂತಗಳದರಿಂದ
ಶುಚಿಯಪ್ಪುದೆಲ್ಲ ಕಾಲದೊಳು.

ಒಳ್ಳೆಯಮಾರ್ಗದಲ್ಲಿ ನಡೆದವರಿಗೆ ಯಮನೂರು ದೂರವಾಗುತ್ತದೆ; ಇಲ್ಲದವರಿಗೆ ಹತ್ತಿರವಾಗುತ್ತದೆ. ಮಾತು ಉಡುಗದ ಮುಂಚೆಯೇ ವಿಷ್ಣುವಿನ ಹೆಸರುಗಳನ್ನು ಹೇಳಬೇಕು.

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ತಕ್ಷಕನಿಂದ ತನಗೆ ಆಪತ್ತು ಬರುವುದೆಂದರಿತೊಡನೆಯೇ ಪರೀಕ್ಷಿತರಾಯನು ಭಾಗವತವನ್ನು ಕೇಳಿ ವಿಷ್ಣುಪದವಿಯನ್ನು ಪಡೆದನು. ಖಟ್ವಾಂಗನೆಂಬ ದೊರೆಯೂ ಸಾಯುವುದಕ್ಕೆ ಮುಹೂರ್ತದ ಮುನ್ನ ವಿಷ್ಣುವನ್ನು ಭಜಿಸಿ ಪರಮಪದವನ್ನು ಪಡೆದನು. ವ್ಯಾಸವಾಲ್ಮೀಕಿಗಳು ಜನರ ಉದ್ಧಾರಕ್ಕಾಗಿ ತಮ್ಮ ಗ್ರಂಥಗಳನ್ನು ಬರೆದಿದ್ದಾರೆ. ಅವುಗಳ ಪಠಣದಿಂದ ನಮ್ಮ ಮನಸ್ಸು ಶುದ್ಧಿ ಹೊಂದಿ, ಇಷ್ಟಾರ್ಥಕ್ಕೈಗೂಡಿ ಮೋಕ್ಷ ದೊರಕುತ್ತದೆ.

ಪತಿಯೊಲವಕ್ಕೆ ಸತಿಯರೊಳು ಸತಿಯರು
ಪತಿಪಾದ ಭಕ್ತಿಯರಕ್ಕೆ
ಸತಿಯರ ಪ್ಯೆಪೆ ಸಕಲ ಜಗದೊಳು ನಿಲ್ಕೆ
ಸತಿಧರ್ಮ ಶಾಶ್ವತಮಕ್ಕೆ

ಮಳೆಯಕ್ಕೆ ಕಾಲಕಾಲಕ್ಕೆ ದೇವರೊಲವಿಂದೆ
ಬೆಳೆಗೈಗೆ ಪೆರ್ಚುಗೆಯಕ್ಕೆ
ಇಳೆಯೊಳು ಪತಿ ಪುತ್ರ ಪೌತ್ರ ಸಂಪದದೊಡ
ನೊಳುಪೆಂಡಿರೊಪ್ಪದೊಳಿರ್ಕೆ

ಕನ್ನಡನಾಡೊಳು ಕಲಿಯುಗ ಪುಗದಿರ್ಕೆ
ಕನ್ನಡಿಗರು ಘನರಕ್ಕೆ
ಉನ್ನತಿವಡೆಗೆಯುಗರದೇಗುಲಗಳು
ಸನ್ನುತವಡೆಗೆ ಸತ್ರಗಳು.

ಈ ವಸುಧೆಯ ಧರ್ಮದೊಳು ಪಾಲಿಸುಗೆ ಚಿಕ್ಕ
ದೇವರಾಜೇಂದ್ರ ಚಂದ್ರಮನು
ದೇವಗೋವಿಪ್ರಸಂತತಿ ಸಂತಸದೊಳಿರ್ಕೆ
ಗೋವಿಂದಗಾನಂದಮಕ್ಕೆ.

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

೪. ವಿಮರ್ಶೆ

ಹೊನ್ನಮ್ಮನ ಗ್ರಂಥದ ವಿಷಯದ ಹರಹನ್ನು ಪರಿಚಯ ಮಾಡಿಕೊಡುವುದಕ್ಕಾಗಿ, ಸಂಧಿಗಳಲ್ಲಿ ನಿರೂಪಿತವಾದ ಅಂಶಗಳನ್ನು ಸ್ವಲ್ಪಮಟ್ಟಿಗೆ ಲಂಬಿಸಬೇಕಾಯಿತು. ಈಗ ಈ ಗ್ರಂಥದಲ್ಲಿ ಕಂಡುಬರುವ ಕಾವ್ಯಗುಣಗಳ ವಿಷಯವನ್ನು ಕುರಿತು ವಿಮರ್ಶೆಯ ರೂಪವಾಗಿ ಒಂದೆರಡು ಮಾತುಗಳನ್ನು ಹೇಳಲು ಪ್ರಯತ್ನಿಸಿದೆ.

ಹೆಣ್ಣು ಮಕ್ಕಳೂ ಕವನ ಕಟ್ಟಬಹುದು, ಕವಯಿತ್ರಿಯರಾಗಬಹುದು ಎಂದು ರಾಜಶೇಖರನು ಹೇಳಿದ್ದಾನೆ. ಈ ಮಾತು ನಿಜ. ಜಾಣ್ಮೆ, ಪ್ರತಿಭೆಯ ಕಾಣ್ಕೆ, ವಿದ್ವತ್ತು ಇವು ಗಂಡಸರಿಗೇ ಮೀಸಲೇನಲ್ಲ. ಆದರೂ ಯಾವ ಭಾಷೆಯಲ್ಲಿಯೇ ಆಗಲಿ ಕವಯಿತ್ರಿಯರ ಸಂಖ್ಯೆ ಕಡಿಮೆಯೆಂದೇ ಹೇಳಬೇಕು. ಈ ಸೂತ್ರಕ್ಕೆ ಕನ್ನಡ ಭಾಷೆಯೂ ಹೊರತಲ್ಲ. ಅದರೆ ಯಾವ ಭಾಷೆಯಲ್ಲಿಯೇ ಆಗಲಿ ಜನಪದ ಸಾಹಿತ್ಯರಚನೆ ಮಾಡಿದ ಕೀರ್ತಿಯ ಬಹುಪಾಲ ಹೆಣ್ಣುಮಕ್ಕಳಿಗೇ ಸಲ್ಲುವುದೇನೋ! ಅದೇನೇ ಇರಲಿ, ಕನ್ನಡ ಭಾಷೆಯ ಕೆಲವೇ ಕವಯಿತ್ರಿಯರಲ್ಲಿ ಒಬ್ಬಳೇ ಆದ ಹೊನ್ನಮ್ಮನು, ತನ್ನ ಆವರಣದ ಫಲವಾಗಿ ಪಡೆಯಬಹುದಾದ ವಿದ್ಯೆ ಸಂಸ್ಕಾರಗಳನ್ನು ಪಡೆದು, ಮನೆಯ ಸಂಸಾರದ ಗೃಹಸ್ಥಧರ್ಮದ ಪವಿತ್ರತೆಯನ್ನು ಮನಗಂಡು ಸತೀಧರ್ಮವನ್ನು ಕಾವ್ಯರೂಪದಲ್ಲಿ ಹಾಡಲು ಮನಸ್ಸು ತಂದಳು. ಯಾವುದೇ ಒಂದು ಕಥೆಯನ್ನು ನಿರೂಪಿಸುವುದಾಗಲೀ, ದೊಡ್ಡದೊಂದು ಪಾತ್ರವನ್ನು ಚಿತ್ರಿಸಿ ನಮ್ಮ ಮುಂದೆ ನಿಲ್ಲಿಸುವುದಾಗಲೀ ಅವಳ ಪರಮೋದ್ದೇಶವಾಗಿರಲಿಲ್ಲ. ಆದ್ದರಿಂದ ಹೊನ್ನಮ್ಮನ ಕಾವ್ಯಕ್ಕೆ ನೀತಿಯೇ ನೆಲಗಟ್ಟು, ತಳಹದಿ

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ಎಂಬ ಹೇಳಿದ ಹಾಗಾಯಿತು. ಕಾವ್ಯದಿಂದುಂಟಾಗುವ ಪ್ರಯೋಜನಗಳಲ್ಲಿ ಕಾಂತಾಸಮ್ಮಿತವಾದ ಉಪದೇಶವೂ ಒಂದೆಂದು ಆಲಂಕಾರಿಕರು ಹೇಳುವುದುಂಟು. ಆದರೆ ಕಾವ್ಯಕ್ಕೆ ನೀತಿ ವಸ್ತುವಾಗಬಲ್ಲುದೇ, ಅದು ಕಾವ್ಯವನ್ನು ವಿಕಾರಗೊಳಿಸು ವುದಿಲ್ಲವೇ ಎಂಬ ಪ್ರಶ್ನೆ ಇಲ್ಲಿ ತಲೆಯೆತ್ತಬಹುದು.

ಕಾವ್ಯಕ್ಕೆ ಯಾವುದು ವಸ್ತುವಾಗಬಲ್ಲದೆಂಬುದಕ್ಕೆ 'ದಶ ರೂಪಕ'ದ ಕೊನೆಯಲ್ಲಿ ಬರುವ ಈ ಪದ್ಯವನ್ನು ನೆನೆಯ ಬಹುದು.

ರಮ್ಯಂ ಜುಗುಪ್ಸಿತಮುದಾರಮಥಾಪಿ ನೀಚಂ
ಉಗ್ರಂ ಪ್ರಸಾದಿ ಗಹನಂ ವಿಕೃತಂ ಚ ವಸ್ತು |
ಯದ್ವಾಪ್ಯವಸ್ತು ಕವಿಭಾವಕಭಾವ್ಯಮಾನಂ
ತನ್ನಾಸ್ತಿ ಯನ್ನ ರಸಭಾವಮುಪೈತಿ ಲೋಕೇ ||

'ರಮ್ಯ, ಅಸಹ್ಯ, ಉದಾರ, ನೀಚ, ಉಗ್ರ, ಪ್ರಸನ್ನ, ಕ್ಲಿಷ್ಟ, ವಿಕೃತ—ವಸ್ತು ಹೀಗೆ ಯಾವುದಾದರೂ ಆಗಿರಲಿ, ಕಡೆಗೆ ವಸ್ತುವಲ್ಲದ್ದೇ ಆಗಿರಲಿ: ಕವಿ ಭಾವಕರ ವಿಷಯವಾದ ಮೇಲೆ ರಸಮಯವಾಗದ್ದು ಲೋಕದಲ್ಲಿ ಏನೊಂದೂ ಇಲ್ಲ.'

ಈ ಅಭಿಪ್ರಾಯದಂತೆ ಕವಿ ಕರ್ಮಕ್ಕೆ ಯಾವುದೇ ಒಂದು ವಿಷಯವು ವಸ್ತುವಾಗಬಹುದು. ಆದರೆ ಆ ವಸ್ತುವನ್ನು ಕವಿ ಪರಿಭಾವಿಸುವ, ಪರಿಭಾವಿಸಿದುದನ್ನು ರಸಮಯವಾಗಿ ನಿರೂಪಿ ಸುವ ರೀತಿ ಮುಖ್ಯವಾದುದು. ನೀತಿಬೋಧೆ ಖಂಡಿತವಾಗಿ ಬೇಸರ ತರುತ್ತದೆ; ವಕ್ರವಾಗಿ ಪರಿಣಮಿಸುತ್ತದೆ. ಆದರೆ ಕವಿಯ ಕಾಣ್ಕೆಯಿಂದ, ಹಸು ತಿಂದ ಹುಲ್ಲು ಹಾಲಾಗಿ ಪರಿಣಮಿಸುವಂತೆ ನೀತಿಯೂ ರಸಮಯವಾಗಿ ಮೂಡಿ ಸರ್ವ ಗ್ರಾಹ್ಯವಾಗುತ್ತದೆ. ನಮ್ಮ ಬಾಳಿಗೆ ನೀತಿಯೇ ಬೆನ್ನು

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ಮೂಳೆಯಾಗಿರುವಾಗ ಕಾವ್ಯಕ್ಕೆ ಅದು ಹಿನ್ನೆಲೆಯಾಗಿ ಬಂದರೆ ಹೇಳತಕ್ಕದ್ದೇನಿದೆ? ಸಂಸ್ಕೃತ ಭಾಷೆಯ ರಾಮಾಯಣ ಮಹಾಭಾರತಗಳನ್ನಾಗಲೀ ಪಂಚತಂತ್ರ ಹಿತೋಪದೇಶಗಳನ್ನಾಗಲೀ, ನಮ್ಮ ಭಾಷೆಯ ಕಾವ್ಯಗಳನ್ನಾಗಲೀ ಗಣನೆಗೆ ತೆಗೆದುಕೊಂಡರೆ ಅಲ್ಲಿ ಧರ್ಮೋಪದೇಶಕ್ಕೆ ಕೊನೆ ಮೊದಲೇ ಇಲ್ಲ. ಭರ್ತೃಹರಿಯ ನೀತಿಶತಕವೂ, ಸೋಮೇಶ್ವರಶತಕ ಸರ್ವಜ್ಞವಚನಗಳೂ ಈ ಜಾತಿಗೆ ಸೇರಿದವು. ಆದರೂ ಅವು ಇಂದಿಗೂ ಜನಪ್ರಿಯವಾಗಿವೆ. ಲೋಹ ಯಾವುದೇ ಇರಲಿ ಅದರಲ್ಲಿ ಮೂಡಿಬರುವ ಕಲಾಕೃತಿಗೆ ಬೆಲೆ ಬರುವಂತೆ, ವಸ್ತು ಯಾವುದೇ ಇರಲಿ ಕವಿತೆಯ ರೀತಿಯಿಂದ ಅದಕ್ಕೆ ಬೆಲೆ ಬರುತ್ತದೆ. ಈ ದೃಷ್ಟಿಯಿಂದ ನೋಡಿದರೆ ಹೊನ್ನಮ್ಮನ ಕಾವ್ಯರಸಮಯವಾಗಿದೆ; ಉತ್ತಮವಾಗಿದೆಯೆಂದು ತಕ್ಕ ಮಟ್ಟಿಗೆ ಧೈರ್ಯಮಾಡಿ ಹೇಳಬಹುದು. ತಕ್ಕ ಉದಾಹರಣೆಗಳಿಂದ ಈ ಅಂಶವನ್ನು ಸಮರ್ಥಿಸಬಹುದು.

ಹೊನ್ನಮ್ಮನ ಕಾವ್ಯದಲ್ಲಿ ಯಾವ ಕಥೆಯೂ ಇಲ್ಲವಾದರೂ ಆರ್ಯಸಮಾಜದಲ್ಲಿ ಮನೆಮನೆಯಲ್ಲಿಯೂ ಕಂಡುಬರುವ ಹೆಸರಿಲ್ಲದ ಆದರೆ ಸಾರ್ವತ್ರಿಕವಾಗಿ ಕಂಡುಬರುವ ಸಾಧ್ವಿಯ ದಿನಚರಿಯ ಕಥೆ ನಿರೂಪಿತವಾಗಿದೆ. ಈ ಸಾಧ್ವಿ ಮಗಳು, ಸೊಸೆ, ಗೃಹಿಣಿ, ಅತ್ತಿಗೆ, ನಾದಿನಿ, ತಾಯಿ–ಇವರೆಲ್ಲರ ಪ್ರತಿನಿಧಿಯಾಗಿ ನಿಂತಿದ್ದಾಳೆ. ಈಕೆ ಮುಗ್ಧೆ, ದಾಂಪತ್ಯಜೀವನದಲ್ಲಿ ಹೊಸದಾಗಿ ಕಾಲಿಟ್ಟವಳು. ಈ ತಮ್ಮ ಮಗಳನ್ನು ಗಂಡನ ಮನೆಗೆ ಕಳುಹಿಸುವಾಗ ತಂದೆ ತಾಯಿಗಳು ಕಣ್ಣೀರು ಮಿಡಿಯುತ್ತಾರೆ; ಬುದ್ಧಿ ಹೇಳುತ್ತಾರೆ– ಗಂಡನ ಮನೆಯಲ್ಲಿ ಈಕೆಯ ವರ್ತನೆ ಹೇಗಿರಬೇಕೆಂಬುದನ್ನು ಕುರಿತು.

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ಅತ್ತೆಮಾವಂದಿರಿಗಳುಕಿಯಕ್ಕರುಗೂಡಿ
ಚಿತ್ತವರಿತು ಸೇವೆಯೆಸಗು
ಅತ್ತಿಗೆನಾದಿನಿಯರನನುವರ್ತಿಸು
ಪೆತ್ತವರನು ಪೆರ್ಮೆಗೊಳಿಸು.

ಮಗಳೆ, ನಿನ್ನಿನಿಯನ ಮನೆಯವರೆಸ್ಮೊಳು
ಪಗೆ ಸಾಧಿಸಿ ಬಯ್ದೊಡದಕೆ
ಬಗೆಯೊಳು ತಾಳುಮೆಯನು ಬಲಿದವರೊಳು
ಮೊಗವಂಟದೆ ಮೋನವೆಸಗು.

ಎಂತು ನಡೆದೊಡನಿಯನಿಗಿಂಪುದೋರುವು
ದೆಂತು ನಡೆದೊಡೇಳ್ಗೆಯಹುದು,
ಎಂತು ನಡೆದೊಡೆಲ್ಲರುಮಿದು ಲೇಸೆಂಬ
ರಂತಿರು ಸಂತೋಷದೊಳು.

ಈ ಮಾತಿಗೆ ಯಾರ ಮನಸ್ಸು, ಹೃದಯ ತಾನೇ ಕರಗದು. ಕಣ್ಣಾರ ಮಾತು ಕಾವ್ಯವಾದರೆ ಇದೂ ಕಾವ್ಯವಾಗಬೇಕಲ್ಲವೆ?

ಗಂಡನ ಮನೆಯನ್ನು ಸೇರಿದ ಈ ಹೆಣ್ಣು ಹೊಸ ಜೀವನ ದಲ್ಲಿ ಬಾಳಬೇಕಾಗುತ್ತದೆ. ಗಂಡನಿಂದ ಮೊದಲ್ಗೊಂಡ ಪ್ರತಿಯೊಬ್ಬರೂ ಹೊಸಬರೇ! ಈಕೆಯಾದರೋ ಏನೊಂದೂ ಅರಿಯದ ಎಳೆಯಳು. ಅಭಿಮಾನದ ಮೂರ್ತಿ. ಈಕೆಗೆ ಗಂಡನ ವಿಷಯದಲ್ಲಿ ತುಂಬ ಪ್ರೀತಿಯಿದೆ. ಆದರೆ ಅದನ್ನು ಪ್ರಕಟಿಸಲು ನಾಚಿಕೆ. ಗಂಡ ನಿಟ್ಟಿಸಿ ನೋಡಿದರೆ ಈಕೆ ತಲೆ ಬಾಗುತ್ತಾಳೆ. ಅಷ್ಟೇ ಅಲ್ಲದೆ—

ಕೊಂಕುಗಲಿವ ನೋಟ ಕುಣಿಯಲೆಳಸುವಪು
ರ್ಬಂಕೆಗೆ ನಿಲದಭಿಲಾಷೆ
ಬಿಂಕವಡೆವ ನಡೆವೆತ್ತೆಳೆವೆಂಡಿರ
ಸೋಂಕುವುದವರೊಲವರಿತು.

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ಈ ಹೊನ್ನಮ್ಮ ಚಿತ್ರಿಸಿರುವ ಈ ಸರಳ ಮುಗ್ಧೆಯ ಚಿತ್ರ ರಮ್ಯವಾಗಿಲ್ಲವೇ ?

ಕಾಲಕ್ರಮದಲ್ಲಿ ಹೊಸ ಆವರಣಕ್ಕೆ ಹೊಂದಿಕೊಂಡ ಈ ಮುಗ್ಧೆ, ಪತಿರಾಯನು ಒಮ್ಮೊಮ್ಮೆ ಕೋಪಿಸಿಕೊಂಡರೂ ತನ್ನ ಒಳ್ಳೆಯ ನಡತೆಯಿಂದ ಜಾಣ್ಮೆಯಿಂದ ಅವನ ಮನಸ್ಸನ್ನು ಒಲಿಸಿಕೊಳ್ಳುತ್ತಾಳೆ; ಅವನಿಗೆ ಪ್ರಿಯಳೆನಿಸುತ್ತಾಳೆ. ಅವನು ಕಣ್ಮರೆಯಾದರೆ ದೂರದೇಶಕ್ಕೆ ಹೋದರೆ ವಿರಹದಿಂದ ಅವಳ ಮನಸ್ಸು ಕುಗ್ಗುತ್ತದೆ. ಆಕಾಲದಲ್ಲಿ ಆಕೆಗೆ ಊಟ ಉಡುಗೆಗಳಾಗಲೀ, ತಿಂಡಿ ತೀರ್ಥಗಳಾಗಲಿ ರುಚಿಸವು. ಗಂಡನ ಬರುವಿಕೆಯನ್ನೇ ಹಾರೈಸುತ್ತ ಕಾಲಕಳೆಯುತ್ತಾಳೆ. ಆಗ ಆಕೆಯ ಮನಸ್ಸಿನ ಸ್ಥಿತಿ, ಮುಖದಲ್ಲಿ ಹೀಗೆ ಪ್ರತಿಬಿಂಬಿತವಾಗಿದೆ.

ಕೆಂದಳಿಗ್ಗೆಯ್ದಳದೊಳಗಿಟ್ಟ ಗಲ್ಲದ
ಕಂದಿದ ಮೊಗದಾವರೆಯು
ಸಂದಣಿಸುವ ಬಿಟ್ಟುಸಿರ ನೆಲೆಯೊಳಿ
ಪ್ಪಂದಗೆಡಿಪಳಾಳಿಯನು.

ವರುಷಗಳು ಕಳೆದಂತೆ ಈಕೆ ದೊಡ್ಡವಳಾಗಿ ಅತ್ತೆಮಾವಂದಿರಿಗೆ ಮೆಚ್ಚಾಗಿ, ಅವರ ನಡತೆಯನ್ನು ಅನುಕರಿಸಿ ದೊಡ್ಡ ಕುಟುಂಬದ ನಿರ್ವಹಣೆಗೆ ಸರಿಯಾದ ಯೋಗ್ಯತೆಯನ್ನು ಸಂಪಾದಿಸುತ್ತಾಳೆ. ಸತ್ಸಂಪ್ರದಾಯಗಳ ನೆಲೆವೀಡು ಈ ಸಾಧ್ವಿ. ದೇವರನ್ನು ನೆನೆಯುತ್ತ ಮೇಲೆದ್ದು, ಇನ್ನೂ ಹಾಸಿಕೆ ಬಿಟ್ಟೇಳದಿರುವ ಇನಿಯನಿಗೆ ತನ್ನ ಮುದ್ದು ಮುಖ ತೋರಿಸಲು ಕಾದು, ಆ ಬಳಿಕ ಅತ್ತೆಮಾವಂದಿರಿಗೆ ಗುರು ಹಿರಿಯರಿಗೆ ನಮಸ್ಕರಿಸಿ, ಮಕ್ಕಳಿಗೆ ಹಾಗೂ ತನಗಿಂತಲೂ ಕಿರಿಯರಾದವರಿಗೆ ನಡೆನುಡಿ

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ಗಳಲ್ಲಿ ನೀರ್ಗತೋರಿ, ಮಿಂದು ಮಡಿಯುಟ್ಟು ಶುಚಿರುಚಿಯಾಗಿ ಪಾಕಗೈದು ದೇವತಾರ್ಚನೆಯಾದ ಬಳಿಕ ಗಂಡನಿಗೆ ಅತಿಥಿ ಅಭ್ಯಾಗತರಿಗೆ ಅನ್ನವಿಟ್ಟು ಆ ಬಳಿಕ ಊಟ ಮಾಡುತ್ತಾಳೆ ಈಕೆ. ಈ ಗರತಿ ಮನೆಯ ಅನ್ನಪೂರ್ಣೆ. ಮನೆಯ ಹೊರೆಹೊಣೆಗಳೆಲ್ಲ ಈಕೆಯದೇ. ಹಾಗೆಂದು ಈಕೆ ತನ್ನ ಸ್ವಾತಂತ್ರ್ಯವನ್ನು ದುರುಪಯೋಗಪಡಿಸಿಕೊಂಡು ಸ್ವಚ್ಛಂದದಿಂದ ವರ್ತಿಸುವ ಧೂರ್ತಳಲ್ಲ ಇವಳು. ಮನೆಗೆ ಸಂಬಂಧಿಸಿದ ಪದಾರ್ಥಗಳನ್ನು ಒಪ್ಪವಾಗಿಡುವುದರಲ್ಲಿ, ಕೆಟ್ಟಜನರ ಸಹವಾಸವನ್ನು ತೊರೆದು ಸಜ್ಜನರೊಡನೆ ಸದ್ಗ್ರಂಥಗಳ ಶ್ರವಣ ಮನನಗಳಲ್ಲಿ ಈಕೆಯ ಕಾಲ ಕಳೆಯುತ್ತದೆ. ಇಂಥ ಸಾಧ್ವಿಯರಿಂದಲೇ ಮನೆಗೆ ಬದುಕು, ಜೀವ, ಕಳೆ, ಕಾಂತಿ. ಈ ಹೆಣ್ಣುಮಗಳ ಬದುಕು ಮನೆಯ ನಾಲ್ಕುಗೋಡೆಗಳ ಒಳಗಡೆಯೇ ಇರಬಹುದು; ಅದು ತನ್ನ ಗಂಡನ ಮಕ್ಕಳ ಸುತ್ತಲೇ ಸುತ್ತುತ್ತಿರಬಹುದು; ಅದು ವೈವಿಧ್ಯ ಪೂರ್ಣವಲ್ಲದುದಾಗಿರಬಹುದು. ಆದರೂ ಆ ಬದುಕು ಸಂತೃಪ್ತಿಯನ್ನು ಬೀರತಕ್ಕ, ತುಂಬು ಗಾಂಭೀರ್ಯದಿಂದ ಪ್ರವಹಿಸುವ ಗಂಗೆಯಂಥ ಪ್ರಶಾಂತವಾದ ಬದುಕು. ಇಂದಿಗೂ ನಮ್ಮ ನಾಡಿನ ಮನೆಮನೆಗಳಲ್ಲಿ ಸ್ವಲ್ಪ ಹೆಚ್ಚು ಕಡಿಮೆ ಈ ತೆರನಾದ ಸಾಧ್ವಿಯರ ಚಿತ್ರ ಗೋಚರಿಸುತ್ತದೆ. ನಮ್ಮ ಸಂಸ್ಕೃತಿ ಇಂದಿಗೂ ಉಳಿದು ಬಂದಿದ್ದರೆ ವಿಶೇಷವಾಗಿ ಈ ಆರ್ಯಮಹಿಳೆಯರ ಪ್ರಭಾವದಿಂದಲೇ.

ಈ ಸಂದರ್ಭದಲ್ಲಿ ಒಂದು ಪ್ರಶ್ನೆ ತಲೆದೋರುತ್ತದೆ. ಸಾಮಾನ್ಯವಾದ ಕೆಲವು ನೀತಿಯ ನೆಲೆಗಟ್ಟುಗಳು ಕಾಲದೇಶಗಳನ್ನು ಮೀರಿ ನಿಂತಿರುವುವಾದರೂ, ಮನುಷ್ಯರ ಆಚಾರ ವಿಚಾರಗಳು ಕಾಲಕಾಲಕ್ಕೆ ಬದಲಾಗುವುವೆಂಬುದು ಸರ್ವ

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ವಿದಿತವಾದ ಅಂಶ. ಹೀಗಿರುವಲ್ಲಿ ಹೊನ್ನಮ್ಮನು ಬೋಧಿಸಿರುವ 'ಸತೀಧರ್ಮ' ನಮ್ಮ ಕಾಲಕ್ಕೆ ಎಷ್ಟರ ಮಟ್ಟಿಗೆ ಗ್ರಾಹ್ಯವೆಂಬ ವಿಚಾರವನ್ನು ಇಲ್ಲಿ ಸ್ವಲ್ಪ ಮಟ್ಟಿಗೆ ಪರಿಶೀಲಿಸಬಹುದಾಗಿದೆ. ಇದಕ್ಕಿಂತ ಮುಂಚೆ ಈ ವಿಷಯವಾಗಿ ಹೊನ್ನಮ್ಮನು ಹೇಳಿರುವ ಕೆಲವು ವಾಕ್ಯಗಳನ್ನು ನಾವು ಗಮನಿಸಬಹುದು. ಆ ವಾಕ್ಯಗಳು ಇವು.

'ಒಡೆಯನಿರಿಸಿದಂತಿರ್ಪುದಲ್ಲದೆ ಪೇಳ್ಪೊಡವಿಗೆ ಬೇರಿರವುಂಟೆ?' 'ಪತಿಯನೆ ಪರದೇವತೆಯೆಂದು ಭಜಿಸುವ ಸತಿಯರ ಸನ್ನುತಿಸುವೆನು.' 'ಪತಿಯೆ ಪರಮಗುರು ಪತಿಯೇ ದೇವತೆ ಪತಿಯೇ ಸದ್ಗತಿ' 'ಪತಿಯಾಣತಿಯ ಬಂದಿಯೊಳಡಗಿರ್ಪುದು' 'ಮುಡಿಯೊಳು ಪೊತ್ತು ಮುದ್ದಿಸಿದೊಡೇನಡಿಗಳಿಂ ಪೊಡವಿಗಿಟ್ಟೊರಸಿದೊಡೇನು ಒಡೆಯನಿಟ್ಟಂತಿರ್ಪುದೊಡವೆಗುಚಿತ' 'ಬಳಿವಿಡಿದಿನಿಯನ ಪಾದಾರವಿಂದದ ನೆಳಲಂತೆ ನೇಮದೊಳಿಹುದು.' 'ಒಂದಡಿಯಿಂದೊದೆದೊಡಮದನುಳಿದು ಮತ್ತೊಂದಡಿಪಿಡಿದೊಡಬಡಿಸು' 'ಕುಲಕೆ ಪೊರಗು ಕೊಟ್ಟ ಹೆಣ್ಣು'

ಗಂಡನನ್ನೇ ದೇವರೆಂದೂ, ಅವನನ್ನೇ ಅನನ್ಯಳಾಗಿ ಶರಣು ಹೊಂದಬೇಕೆಂದೂ ಹೊನ್ನಮ್ಮ ಹೇಳುವ ಹೇಳಿಕೆಗಳಲ್ಲಿ ಕೆಲವು ಮಾತ್ರ ಇವು. ಈ ಹೇಳಿಕೆಗಳನ್ನು ವಿಮರ್ಶಿಸುವಾಗ ನಮ್ಮದು ಆಧುನಿಕದೃಷ್ಟಿ ಯೆಂಬುದನ್ನು ಮರೆಯಬಾರದು. ಹೊನ್ನಮ್ಮನು ಬದುಕಿದ್ದುದು ಮುನ್ನೂರೈವತ್ತು ವರ್ಷಗಳ ಹಿಂದೆ. ಆಗ ಶಾಸ್ತ್ರದ ಕಟ್ಟು ಬಲವಾಗಿತ್ತು. ರಾಜಕೀಯದ ಅನಿಶ್ಚಯತೆಯಲ್ಲಿ ಅಬಲೆಯಾದ ಹೆಣ್ಣಿನ ಮಾನ ಉಳಿಯಬೇಕಾದರೆ ಆಕೆಗೆ ಗಂಡಸರ ರಕ್ಷಣೆ ಆವಶ್ಯಕವೆಂದು ನಂಬಿದ್ದ

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ಕಾಲ ಅದು. ಅಲ್ಲದೆ ಹೆಣ್ಣು ಭೋಗವಸ್ತುಗಳಲ್ಲಿ ಒಂದೆಂದು ಹಿಂದಿನವರು ತಿಳಿದಿದ್ದರು. ಅಸಹಾಯಕತೆಯಿಂದಲೋ ಇಲ್ಲವೆ ಇನ್ನಾವ ಕಾರಣದಿಂದಲೋ ಹೆಂಗಸರೂ ಮನೆಯಲ್ಲಿ ತಮ್ಮ ಸ್ಥಾನವನ್ನು ಒಪ್ಪಿಕೊಂಡಿದ್ದರು. ಆದರೆ ಒಮ್ಮೆ ಅವರು ಗಂಡನನ್ನು ಒಲಿಸಿಕೊಂಡರೆ ಸಾಕು. ಮನೆಯಲ್ಲಿ ಅವರದೇ ಆಧಿಪತ್ಯ, ಯಾಜಮಾನ್ಯ, ಸ್ವಾತಂತ್ರ್ಯ. ಇಂದಿಗೂ ನಮ್ಮ ಸಮಾಜದಲ್ಲಿ ಈ ಸ್ಥಿತಿ ಉಳಿದಿದೆ. ಹೊನ್ನಮ್ಮನೂ ತನ್ನ ಕಾಲದ ಕೂಸಾಗಿ, ಆ ನಂಬಿಕೆಗಳನ್ನು ನಂಬಿ ಅದರಂತೆಯೇ ತನ್ನ ಬಾಳನ್ನು ನಡೆಸಿ, ಇದಕ್ಕೆ ಹೊಂದಿಕೊಂಡಂತೆ ವಿಷಯವನ್ನು ಪ್ರತಿಪಾದಿಸಿದ್ದಾಳೆ. ಆದರೆ ಇನ್ನೊಂದು ಸಮಾಧಾನ. ಹೆಣ್ಣಿನ ಅಸಹಾಯಕತೆಯನ್ನು ಹೊನ್ನಮ್ಮನು ಒಪ್ಪಿಕೊಂಡಿದ್ದರೂ ಹೆಣ್ಣಿನ ವಿಷಯದಲ್ಲಿ ಆಕೆಗೆ ಅಪಾರವಾದ ಸಹಾನುಭೂತಿ ಇದೆ. ಹೆಣ್ಣನ್ನು ಹೇಗೆ ಬೆಳಸಬೇಕು, ಎಂಥವರಿಗೆ ಹೆಣ್ಣನ್ನು ಕೊಡಬೇಕು, ಕೊಟ್ಟ ಹೆಣ್ಣು ಕುಲಕ್ಕೆ ಹೊರಗಾದರೂ ಆ ಹೆಣ್ಣನ್ನು ಎಲ್ಲ ಕಾಲಕ್ಕೂ ಹೇಗೆ ಅಕ್ಕರೆ ಯಿಂದ ನೋಡಬೇಕು ಎಂಬ ವಿಷಯಗಳನ್ನು ಧೈರ್ಯವಾಗಿ ಮುಚ್ಚುಮರೆಯಿಲ್ಲದೆ ಹೇಳಿದ್ದಾಳೆ. ಅವಳ ಈ ಧೈರ್ಯಕ್ಕೆ ನಾವು ಹೊನ್ನಮ್ಮನನ್ನು ಮೆಚ್ಚಲೇ ಬೇಕು.

ಆದರೆ ಈಗ ಕಾಲ ಬದಲಾಗಿದೆ. ನಮ್ಮ ದೃಷ್ಟಿ ಪ್ರಪಂಚದ ಮೂಲೆಮೂಲೆಗೆ ಹರಿದು ವಿಶಾಲವಾಗಿದೆ. ಸಮಾಜದಲ್ಲಿ ಹೆಣ್ಣಿನ ಸ್ಥಾನವೇನು ಅವರ ಹಕ್ಕು ಬಾಧ್ಯತೆಗಳೇನು ಎಂಬ ವಿಷಯದಲ್ಲಿ ಚರ್ಚೆ ನಡೆದು, ವಿಷಯ ಒಂದು ನಿಲುಗಡೆಗೆ ಬಂದಿದೆ. ಹೆಣ್ಣು ಗಂಡಿನಂತೆ ಬುದ್ಧಿವಂತೆ, ಆಕೆಗೆ ವಿದ್ಯೆ ಒದಗಿ ಬಂದರೆ ಗಂಡಸಿನಷ್ಟೇ ತನ್ನ ಪ್ರತಿಭೆಯನ್ನು ಪ್ರಕಾಶಿಸ

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ಬಲ್ಲಿಳು, ಗಂಡಸಿನೊಡನೆ ಸ್ಪರ್ಧಿಸಿ ಯಾವ ಹೊರೆಯನ್ನಾಗಲಿ ಹೊಣೆಯನ್ನಾಗಲಿ ಹೊರಬಲ್ಲಳು ಎಂಬುದು ಈಗ ಸರ್ವ ವಿದಿತವಾಗಿದೆ. ಆದ್ದರಿಂದ ನಮ್ಮ ಕಾಲದ ವಿಚಾರದೃಷ್ಟಿಯ ಒರೆಗಲ್ಲಿನ ಮೇಲೆ ಹೊನ್ನಮ್ಮನ ಅಭಿಪ್ರಾಯಗಳು ಬಣ್ಣ ಗುಂದುವುವು. ಹೊನ್ನಮ್ಮನ ಅನೇಕ ಅಭಿಪ್ರಾಯಗಳನ್ನು ನಾವು ಮೆಚ್ಚುವುದಿಲ್ಲ. ಪತಿಯನ್ನೇ ಅನನ್ಯಳಾಗಿ ಶರಣ ಹೊಂದಬೇಕು, ಅವನು ಇಟ್ಟಂತೆ ಹೆಂಡತಿ ಇರಬೇಕು ಎನ್ನುವ ಹೊನ್ನಮ್ಮನ ಹಳೆಯ ಅಭಿಪ್ರಾಯವನ್ನೂ ಅನುಮೋದಿಸುವುದು ಬೇಡ. ಹೆಣ್ಣಿಗೆ ಗಂಡಿನೊಡನೆ ಸ್ಪರ್ಧಿಸುವ ಸ್ವಾತಂತ್ರ್ಯ ಬೇಕೆನ್ನುವ ಅತ್ಯಾಧುನಿಕ ಅಭಿಪ್ರಾಯದ ಮನ್ನಣೆಯೂ ಬೇಡ. ಹೆಂಡತಿ ಗಂಡನ ಸಹಧರ್ಮಚಾರಿಣಿ, ಒಬ್ಬರ ಅಭಿಪ್ರಾಯಕ್ಕೆ ಇನ್ನೊಬ್ಬರು ಮಾನ್ಯತೆ ಕೊಡಬೇಕು, ಹೆಂಗಸಿನಿಂದಲೇ ಮನೆಗೆ ಕಳೆ, ಜೀವ; ಅವಳು ಅನ್ನಪೂರ್ಣೆ, ಸಂಸಾರದ ರಥ ಉರುಳ ಬೇಕಾದರೆ ಎರಡು ಚಕ್ರಗಳೂ ಆವಶ್ಯಕ, ಹೆಣ್ಣುಗಂಡುಗಳಿಗೆ ವಿಶಿಷ್ಟವಾದ ಕರ್ತವ್ಯಗಳುಂಟು, ಆ ಕರ್ತವ್ಯ ನಿರ್ವಹಣೆ ಇಬ್ಬರ ಸಹಕಾರದಿಂದಲೇ ಸಾಧ್ಯವೆಂಬ ಮಧ್ಯಮಾರ್ಗಕ್ಕೆ ನಮ್ಮ ಸಮ್ಮತಿಯನ್ನು ಸೂಚಿಸಬಹುದೆಂದು ತೋರುತ್ತದೆ.

ನೀತಿಪ್ರಧಾನವಾದ ಕಾವ್ಯಗಳಲ್ಲಿ ವಸ್ತುವಿಗಿಂತ, ನಿರೂಪ ಣೆಗೇ ಹೆಚ್ಚು ಪ್ರಾಧಾನ್ಯವೆಂದು ಹಿಂದೆ ಹೇಳಿತಷ್ಟೆ. ಇಲ್ಲಿ ಹೊನ್ನಮ್ಮನ ಕಾವ್ಯರೀತಿಯನ್ನು ಕುರಿತು ಒಂದೆರಡು ಮಾತು ಗಳನ್ನು ಹೇಳಬಹುದು. ರೀತಿಯೇ ಕಾವ್ಯದ ಆತ್ಮ, ಪದಗಳನ್ನು ಒಂದು ವಿಶಿಷ್ಟವಾದ ರೀತಿಯಲ್ಲಿ ರಚಿಸುವುದೇ ರೀತಿ ಎಂಬ ಅಭಿಪ್ರಾಯ ಒಂದು ಕಾಲಕ್ಕೆ ರೂಢಿಯಲ್ಲಿತ್ತು. ಒಂದು ದೃಷ್ಟಿಯಿಂದ ಈ ಅಭಿಪ್ರಾಯ ಸರಿಯೆಂದು ತೋರುತ್ತದೆ.

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ಏಕೆಂದರೆ ಪ್ರತಿಭಾವಂತನೂ ಅನುಭವಶಾಲಿಯೂ ಆದ ಕವಿಯ ಬರವಣಿಗೆಯಲ್ಲಿ ರಸಕ್ಕೆ ಅನುಗುಣವಾದ ಶಬ್ದಾರ್ಥಗಳು ಹೊಂದಿಕೊಂಡು ಬಂದು ಅವನ ಮನೋಧರ್ಮ ವ್ಯಕ್ತಿತ್ವಗಳು ಮೂಡಿ ಬಂದಿರುತ್ತವೆ. ಈ ಅಂಶವನ್ನು ಸ್ಪಷ್ಟಪಡಿಸುವುದಕ್ಕೆ ಹೊನ್ನಮ್ಮನ ಬರವಣಿಗೆಯೇ ಉತ್ತಮ ನಿದರ್ಶನವಾಗಿದೆ. ಪಂಡಿತರ ಮಧ್ಯೆ ಇದ್ದು, ಅವರಿಂದ ವಿದ್ಯೆ ಪಡೆದು, ಅವರಿಂದ ಮೆಚ್ಚಿಗೆಪಡೆದ ಆತ್ಮಪ್ರತ್ಯಯವುಳ್ಳ ಹೊನ್ನಮ್ಮನು ತನಗೆ ನಿಲುಕತಕ್ಕ ವಿಷಯವನ್ನೇ ಪ್ರತಿಪಾದನೆಗೆ ತೆಗೆದುಕೊಂಡಳು. ಧರ್ಮದ ನಿರೂಪಣೆ ಸರಳವಾಗಿದ್ದರೆ ಗ್ರಾಹ್ಯವಾಗುವುದಲ್ಲವೇ ? ಈ ಗುಟ್ಟನ್ನು ಅರಿತ ಹೊನ್ನಮ್ಮನು ಹೆಣ್ಣುಮಕ್ಕಳು ಹಾಡಿಕೊಳ್ಳಲು ಯೋಗ್ಯವಾದ ಸಾಂಗತ್ಯದ ಛಂದಸ್ಸನ್ನು ಆಯ್ದುಕೊಂಡು, ಇಂಪಾದ ಹುದುಳಾದ ಕನ್ನಡನುಡಿಯಲ್ಲಿ ತನ್ನ ಕಾವ್ಯವನ್ನು ಕಟ್ಟಿದ್ದಾಳೆ.

ಹೊನ್ನಮ್ಮನ ಬರವಣಿಗೆಯ ಮುಖ್ಯಗುಣ ಅರ್ಥವ್ಯಕ್ತಿ. ಹೇಳತಕ್ಕ ವಿಷಯವನ್ನು ನೇರವಾಗಿ ಮುಚ್ಚುಮರೆಯಿಲ್ಲದೆ ಹೇಳುವ ಶಕ್ತಿ ಆಕೆಯ ಮಾತಿಗುಂಟು. ಪತಿವ್ರತೆಯರ ಮಹಿಮೆಯನ್ನೇ ವರ್ಣಿಸಲಿ, ವಿರಹಿಣಿಯನ್ನೇ ಬಣ್ಣಿಸಲಿ ಇಲ್ಲವೆ ಮುಗ್ಧೆಯ ಚಿತ್ರವನ್ನೇ ನಮ್ಮ ಕಣ್ಣಿನ ಮುಂದಿಡಲಿ, ಆ ಚಿತ್ರಗಳು ನಮ್ಮ ಮನಸ್ಸಿನಲ್ಲಿ ಅಚ್ಚೊತ್ತಿದಂತೆ ನಿಲ್ಲುತ್ತವೆ. ಹೀಗೆ ಬರವಣಿಗೆ ಸುಕುಮಾರವಾಗಿ ಬರಲು ಕಾರಣ, ಹೊನ್ನಮ್ಮನ ಶೈಲಿಯಲ್ಲಿ ಹದವಾಗಿ ಬೆರೆತು ಬರುವ ಕನ್ನಡ ಸಂಸ್ಕೃತ ಪದಗಳ ಜೋಡಣೆ. ಒಂದು ಹೆಜ್ಜೆ ಮುಂದೆ ಹೋಗಿ ಹೇಳಬಹುದಾದರೆ ಹೊನ್ನಮ್ಮನು ಒಲವು ಸಂಸ್ಕೃತಕ್ಕಿಂತ ಕನ್ನಡನುಡಿಯ ಮೇಲೆಯೇ ಹೆಚ್ಚು. ಕನ್ನಡನುಡಿಯ ಸಾಮರ್ಥ್ಯವನ್ನು ಆಕೆ ಬಲ್ಲಳು. ಈ ಪದ್ಯವನ್ನು ನೋಡಿ—

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ಪೆಣ್ಣಲ್ಲವೆ ತಮ್ಮನೆಲ್ಲ ಪಡೆದ ತಾಯಿ ?
ಪೆಣ್ಣಲ್ಲವೆ ಪೊರೆದವಳು ?
ಪೆಣ್ಣು ಪೆಣ್ಣೆಂದೇತಕೆ ಬೀಳುಗಳೆವರು
ಕಣ್ಣು ಕಾಣದ ಗಾವಿಲರು ?

ಮೇಲಿನ ಪದ್ಯದಲ್ಲಿ ಗಾವಿಲ ಎಂಬ ತದ್ಭವವನ್ನು ಬಿಟ್ಟರೆ ಒಂದು ಸಂಸ್ಕೃತಪದವೂ ಇಲ್ಲ. ಅಚ್ಚಗನ್ನಡ ನುಡಿಗಟ್ಟಿನ ಜೊತೆಗೆ, ಹೆಣ್ಣನ್ನು ತುಚ್ಛವಾಗಿ ಕಾಣುವವರಿಗೆ ಸಮರ್ಪಕ ವಾಗಿ ಕೊಟ್ಟಿರುವ ಚುಚ್ಚುಮಾತಿನ ಉತ್ತರ ಎಷ್ಟು ಸೊಗ ಸಾಗಿದೆ ! ಇದಲ್ಲದೆ ಹೊನ್ನಮ್ಮನು ನೆಡೆವೆಣ, ಬೀಳುಗುವರ ಇಂಥ ಪದಗಳನ್ನು ಸೃಷ್ಟಿಸಿ, ಅದಕ್ಕೆ ಚಲಾವಣೆಯ ಮುದ್ರೆ ಯನ್ನೊತ್ತಿ ತನ್ನ ಜಾಣ್ಮೆಯನ್ನು ಪ್ರದರ್ಶಿಸುತ್ತಾಳೆ. ಇದರಿಂದ ಹೊನ್ನಮ್ಮನಿಗೆ ಸಂಸ್ಕೃತದ ವಿಷಯದಲ್ಲಿ ದ್ವೇಷವಿತ್ತೆಂಬು ಅಭಿಪ್ರಾಯವಲ್ಲ. ಪ್ರತಿಸಂಧಿಯ ಮೊದಲಲ್ಲಿ ಬರುವ ದೇವತಾ ವಿಷಯಾತ್ಮಕವಾದ ಸ್ತೋತ್ರಪದ್ಯಗಳು ಸಂಸ್ಕೃತಪದಗಳಿಂದ ತುಂಬಿವೆ. ಆದರೆ ಅವೂ ಮೃದುಮಧುರ. ಉದಾಹರಣೆಗೆ—

ನಂದನ ಮೋಹದ ನಂದನ ಸನಕಸ
ನಂದನ ವಂದಿತಚರಣ
ಮಂದರಧರ ಮಾಧವ ಗೋವಿಂದ ಮು
ಕುಂದ ದೇವನೆ ಸಲಹೆನ್ನ.

ಈ ಪದ್ಯದ ಪ್ರಾಸಸಂಪತ್ತೂ ನಾದ ಮಾಧುರ್ಯ ಯಾರ ಮನಸ್ಸನ್ನು ತಾನೆ ಸೆರೆ ಹಿಡಿಯುವುದಿಲ್ಲ. ಅಚ್ಚಕನ್ನಡ ಪದಗಳಿಂದ ತುಂಬಿ ತುಳುಕುವ ಪದ್ಯಗಳಂತೆ ಪ್ರಾಸಸಂಪ ತ್ತನ್ನೂ, ನಾದ ಮಾಧುರ್ಯವನ್ನೂ ಒಳಗೊಂಡ ಪದ್ಯಗಳು ಈ ಗ್ರಂಥದಲ್ಲಿ ಹೇರಳವಾಗಿ ದೊರಕುತ್ತವೆ. ಇನ್ನೊಂದು

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ವಿಷಯ. ಹೊನ್ನಮ್ಮನ ಮನಸ್ಸು ಸುಕುಮಾರವಾದ ಕಾರಣ, ಕವಯಿತ್ರಿಯ ಶೈಲಿ ಶೃಂಗಾರ ಕರುಣೆ ಈ ರಸಗಳ ನಿರೂಪಣೆಗೆ ಯೋಗ್ಯವಾಗಿದೆ. ವೀರ ರೌದ್ರರಸಗಳ ನಿರೂಪಣೆಗೆ ಅದು ಸಮರ್ಥವಾಗಿಲ್ಲ.

ಕಾವ್ಯ ಸೌಂದರ್ಯವನ್ನು ಹೆಚ್ಚಿಸುವುದಕ್ಕೆ ಅಲಂಕಾರಗಳು ಸಹಾಯಕವೆಂಬ ಅಂಶ ಸರ್ವವಿದಿತವಾದದ್ದು. ಆದರೆ ಹಾರವೂ ದೇಹಕ್ಕೆ ಭಾರವಾಗುವಂತೆ, ಅಲಂಕಾರಗಳ ಅತಿಯಾದ ಬಳಕೆಯಿಂದ ಕಾವ್ಯ ಸೌಂದರ್ಯಕ್ಕೆ ಕುಂದುಂಟಾಗಬಹುದು. ಈ ಗುಟ್ಟನ್ನು ಅರಿತ ಹೊನ್ನಮ್ಮನು 'ಪವಣಿಗೆಯೊಪ್ಪೆ ಪುರುಳು ಪೊಗರೇರೆ ಅಂಗವಿಸೆಯಲಂಕಾರಗಳು ಕವಿದು ಪರಿಯೆ ರಸದೊಳ್ಗಂಪು' ಕಾವ್ಯವನ್ನು ಹೇಳಬೇಕೆಂದು ಪ್ರತಿಜ್ಞೆಮಾಡಿ ಹಿತವಾಗಿ ಮಿತವಾಗಿ ಅಲಂಕಾರಗಳನ್ನು ಉಪಯೋಗಿಸಿದ್ದಾಳೆ. ಉಪಮಾ ರೂಪಕ ದೃಷ್ಟಾಂತ ಈ ಮೊದಲಾದ ಪ್ರಸಿದ್ಧವಾದ ಅಲಂಕಾರಗಳೇ ಈ ಗ್ರಂಥದಲ್ಲಿ ಪ್ರಯೋಗವಾಗಿವೆ. ಅನುಪ್ರಾಸವಂತೂ ಅಪ್ರಯತ್ನವಾಗಿ ಈ ಕಾವ್ಯದಲ್ಲಿ ಅರಳಿದೆ. ನೆನಪಿಗೆ ಬಂದ ಕೆಲವನ್ನು ಇಲ್ಲಿ ನಿರೂಪಿಸಬಹುದು. 'ಸಂದ ಸತೀಧರ್ಮವನು ಸಾಹಿತ್ಯದೊಳೊಂದುಗೊಳಿಸಿ' 'ಮುನಿದು ಮೂದಲಿಸಿ ಮೋಡಿಯೊಳಿದ್ದು ಮೂರ್ಖಿಪ ಮೊನೆಗಾತಿ' 'ಕಡುನಾಣ್ಕೆ ಕಣ್ಮುಚ್ಚಿ ಕಂಪನಗೊಂಬ ಬಡವೆಣ್ಣು' 'ಬೀಳು ವಕ್ಕಿಯ ಬೀಳಗೆಡಹಿದ ಬಿಂಕವೀ ಬಳಿಯೊಳು ಬಣ್ಣವಡೆಯದು' 'ತಿಳಿದುಟ್ಟು ತೊಟ್ಟು ಬಣ್ಣಿಗೆಯಿಂದ ಭಾವವ ಬಂದಿಗೊಳುವುದು' 'ನೆವವಿಲ್ಲದೆ ನೆಗ್ಗಿ ನೆಲಕಿಳಿದು' 'ಸುತ್ತುಗೆಲಸವ ಸೊಲ್ಲಿಸದೆಸಗುವುದು' 'ಸಂಸಾರದ ಸುಖದ ಸುಗ್ಗಿ' 'ಸೊಂಪುಗೆಡುವುದು ಸೊಬಗು ಸಂಸಾರದ ಜಂಪು ಸಡಲಿ ಜಾರುವುದು.'

CC0. In Public Domain. Jangamwadi Math Collection, Varanasi

ಎಷ್ಟೊಂದು ಉದಾಹರಣೆಗಳು ! ಎಲೆಯ ಮರೆಯ ಹೂವಿನಂತೆ ಈ ಅಲಂಕಾರದ ಇರುವಿಕೆಯೇ ನಮ್ಮ ಗೋಚರಕ್ಕೆ ಬರುವುದಿಲ್ಲ.

ಮಿಕ್ಕ ಅಲಂಕಾರಗಳಲ್ಲಿ ಈ ಗ್ರಂಥದಲ್ಲಿ ಬರುವ ಉಪಮೆಯನ್ನು ಕುರಿತು ಒಂದು ಮಾತನ್ನು ಹೇಳಬಹುದು. ಈ ಅಲಂಕಾರ ಬರುವ ಕಡೆಗಳಲ್ಲೆಲ್ಲ ಅದು ಸಹಜ ಸುಂದರವಾಗಿ ಮೂಡಿ ಬಂದಿದೆ. ತನ್ನ ಅನುಭವಕ್ಕೆ ಬಾರದ ಯಾವುದೋ ಎರಡು ವಸ್ತುಗಳಿಗೆ ಸಾದೃಶ್ಯ ಸಂಪತ್ತಿಯನ್ನು ಹೊನ್ನಮ್ಮ ತರುವುದಿಲ್ಲ. ಕಾವ್ಯದಲ್ಲಿ ಬರುವ ಕೆಲವು ಹೋಲಿಕೆಗಳನ್ನು ಇಲ್ಲಿ ಪರೀಕ್ಷಿಸಬಹುದು. ಅಂತಃಪುರದಲ್ಲಿ ಚಿಕ್ಕದೇವರಾಯನು ಹೊನ್ನಮ್ಮನ ಕಡೆ ಸರಸಕಟಾಕ್ಷವನ್ನೆಸಗಿದ್ದು 'ಕರುಣಾಮೃತಾಬ್ಧಿಯ ಕಲ್ಲೋಲಗಳಂತೆ' ಆಯಿತು. ದೊರೆ ಹೊನ್ನಮ್ಮನಿಗೆ ಮನ್ನಣೆ ತೋರಿದ್ದು 'ಪೆಳವನೆಡೆಗಾ ಗಂಗೆ ತಾನೈದೆ ಬಂದುದೆಂಬಂತೆ' ಆಯಿತು. ಗಂಡನು ಬಂದುದನ್ನು ಕಂಡು ಹೆಂಡತಿಯಾದವಳು ಎಲ್ಲ ಕೆಲಸವನ್ನು ಬಿಟ್ಟೆದ್ದು 'ಸೋಗೆ ಮುಗಿಲ ಕಂಡು ಸೊರ್ಕುವಂದದೊಳು' ಅನುರಾಗವನ್ನು ತೋರಿಸಬೇಕು. ಸಂಸಾರವೆಂಬುದೊಂದು ಸಾಗರ. ಅದನ್ನು ದಾಟ ಬಯಸುವ ಸತಿ ಪತಿಯರು 'ಒಂದೆ ನಾವೆಯೊಳೇರಿದವರಂತೆ' ಒಪ್ಪವಾಗಿರಬೇಕು. ಇಲ್ಲವಾದರೆ ನಾವೆಯೇ ತಲೆಕೆಳಗು! ನಾಚಿಕೆಯಿಂದ ಬಗ್ಗಿ ಹೋಗಿರುವ ಮುಗ್ಧೆಯರನ್ನು ಸರಿಯಾಗಿ ತಿಳಿಯ ಹೇಳದಿದ್ದರೆ 'ಉಗುರೊಳು ಬಾಜಿಪ ಬೀಣೆಗೊನಕೆಗೊಂಬ ಬಗೆಯೆನಿಪುದು' 'ಎರೆವ ತಣ್ಣೀರ ನೆಳೆಸುವೆಳೆವಳ್ಳಿಗೆ ತಳಿರಗೆಂಡವ ತಳಿವಂತೆ' ಆಗುವುದು. ಜೀವಿತೇಶ್ವರನ ವಿರಹ ಸಾಧ್ವಿಗೆ 'ದೇವರಿಲ್ಲದ ಪೇಗುಲದ

Digitization by eGangotri and Sarayu Trust. Funding by MoE-IKS

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ಬಿತ್ತರದಂತೆ, ಭೂವರನಿಲ್ಲದೂರಂತೆ' ಆಗಿ ಆಕೆ ಬಣ್ಣಗುಂದು ತ್ತಾಳೆ. ಹೀಗೆಯೇ ಉದಾಹರಣೆಗಳನ್ನು ವಿಸ್ತರಿಸಬಹುದು. ಇದರಿಂದ ಹೊನ್ನಮ್ಮನ ಲೌಕಿಕಾನುಭವ, ಕಣ್ಣಿನ ಆಳ ಸ್ಪಷ್ಟವಾಗುತ್ತದೆ.

ಹೊನ್ನಮ್ಮನ ಲೇಖನಿಯಿಂದ ಅರ್ಥಗರ್ಭಿತವಾದ, ನಾಣ್ನುಡಿಯಂಥ ವಾಕ್ಯಗಳು ಹೊರಬಿದ್ದು ಆಕೆಯ ಬರವಣಿಗೆಗೆ ಕಳೆ ಕೊಡುತ್ತಿವೆ. ಈ ಹೇಳಿಕೆಯ ಸಮರ್ಥನೆಗೆ ಕೆಲವು ಉದಾಹರಣೆಗಳು. 'ಪರಸಿದುದೆ ಅನುಗ್ರಹ; ಖತಿಗೊಂಡು ನುಡಿದುವೆ ಶಾಪ' 'ಎಂತು ನಡೆದೊಡೆಲ್ಲರುಮಿದುಲೇಸೆಂಬರಂತಿರು ಸಂತೋಷದೊಳು' 'ಆಚಾರದಿಂದನುಪಮ ಧರ್ಮದೇಳಿಗೆ' 'ಸಕಲ ಸತ್ಕರ್ಮಂಗಳಚ್ಯುತನಾರಾಧನೆ'

ಸರಳವಾದ ಮೃದುಮಧುರವಾದ ಪದಪುಂಜಗಳಿಂದ ಕೂಡಿ, ಹೆಣ್ಣು ಮಕ್ಕಳ ಬಾಳನ್ನು ಉತ್ತಮಗೊಳಿಸಿ, ಸಂಸಾರವನ್ನು ಸುಖಮಯವಾಗಿ ಮಾಡುವ ಗಂಭೀರ ವಿಷಯದಿಂದ ಕೂಡಿ, ಕವಿಯ ಮನೋಧರ್ಮವನ್ನು ಯಥಾವತ್ತಾಗಿ ಪ್ರತಿಬಿಂಬಿಸುವ ಹೊನ್ನಮ್ಮನ ಶೈಲಿ ಸತ್ವಯುಕ್ತವಾಗಿದೆ.

ಮುಕ್ತಾಯ

ಕನ್ನಡಪಲ್ಲಿ ಕಾವ್ಯರಚನೆಮಾಡಿರುವ ಸ್ತ್ರೀಯರ ಹೆಸರುಗಳನ್ನು ನೆನೆದಾಗ, ಮಹಾದೇವಿಯಕ್ಕನ ಹೆಸರು ಮೊದಲು ನಮ್ಮ ಕಣ್ಣಮುಂದೆ ನಿಲ್ಲುತ್ತದೆ. ಇಹಲೋಕದ ಸುಖಗಳನ್ನು ತೊರೆದು, ವೈರಾಗ್ಯವನ್ನು ಸ್ವೀಕರಿಸಿ, ಶಿವನೇ ಗಂಡನೆಂದು ನಂಬಿ ತಪಸ್ಸನ್ನು ಆಚರಿಸಿದವಳು ಮಹಾದೇವಿಯಕ್ಕ. ವೀರ ಶೈವ ಮತದ ಉದ್ಧಾರದ ಚಳುವಳಿಯಲ್ಲಿ ಬಸವಣ್ಣನವರಿಗೆ

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ಬೆಂಬಲವಾಗಿ ನಿಂತು, ತಾನು ಕಂಡ ಕಾಣ್ಕೆಯನ್ನು ನಾಡಿನಲ್ಲಿ ಬೀರಿದವಳು ಈ ವೀರ ತಪಸ್ವಿನಿ. ಇವಳಾದ ಮೇಲೆ ವಿಷ್ಣು ವರ್ಧನನ ಆಸ್ಥಾನವನ್ನು ಅಲಂಕರಿಸಿ, ನಾಗಚಂದ್ರನು ಕೊಟ್ಟ ಸಮಸ್ಯೆಗಳನ್ನು ಪೂರ್ತಿಗೊಳಿಸಿ ಸ್ತ್ರೀಯರು ಬುದ್ಧಿಯಲ್ಲಿ ಪುರುಷರಿಗಿಂತ ಯಾವವಿಧದಲ್ಲಿಯೂ ಕಡಿಮೆ ಇಲ್ಲವೆಂಬುದನ್ನು ತೋರಿಸಿಕೊಟ್ಟ ಕಬ್ಬಿಗಿತಿ ಕಂತಿ. ಇವರಾದ ಮೇಲೆ ನಮ್ಮನ್ನು ಇದಿರುಗೊಳ್ಳುವ ಕವಯತ್ರಿ ಎಂದರೆ ಹೊನ್ನಮ್ಮನೇ. ಆಚಾರ್ಯ ಶ್ರೀಯವರು ಹೇಳುವಂತೆ 'ಹೊನ್ನಮ್ಮ ಸೌಮ್ಯ ಮೂರ್ತಿ; ಮನೆಮಕ್ಕಳ ಗಂಡಹೆಂಡಿರ, ಗೃಹಸ್ಥಾಶ್ರಮದ ಧರ್ಮಬಾಳಿನ ಚೆಲುವನ್ನು ಹೆಣ್ಣುಮಕ್ಕಳ ಹಾಡಿನಲ್ಲಿ ಹಾಡಿ, ನಿತ್ಯಸಂಸಾರದ ನಿಷ್ಕಾಮಕರ್ಮವೇ ಭಗವಂತನ ಪಾದವನ್ನು ಸೇರುವ ಹಾದಿ ಎಂದು ಸಾರಿದವಳು. ಮನೆಯಲ್ಲಿಯೂ ತನ್ನ ಒಡೆಯನ ಮನಸ್ಸನ್ನು ಉಲ್ಲಾಸಪಡಿಸುವ ದುಡಿಮೆ ಯಲ್ಲಿಯೂನಾಡಿನಕೆಲಸವನ್ನು ಮಾಡಿದವಳು.' ಹೊನ್ನಮ್ಮನ ಸಮಕಾಲಿನರಾಗಿಯೋ ಇಲ್ಲವೆ ತರುವಾಯ ಬಂದವರಾಗಿಯೋ ಇರುವ ಸಿಂಗಾರಮ್ಮ, ಹೆಳವನಕಟ್ಟೆ ಗಿರಿಯಮ್ಮ ಮುಂತಾ ದವರು ಕನ್ನಡದಲ್ಲಿ ಕೃತಿರಚನೆ ಮಾಡಿದ್ದರೂ ಯಾರೂ ಹೊನ್ನಮ್ಮನಷ್ಟು ಪ್ರಖ್ಯಾತರಾಗಿಲ್ಲ. ಈ ಕೀರ್ತಿಯಲ್ಲಿಯೇ ಹೊನ್ನಮ್ಮನ ಹಿರಿಮೆ ಅಡಗಿದೆ.

ಚಿಕ್ಕದೇವರಾಯನ ಊಳಿಗದ ಹೆಣ್ಣಾದರೂ, 'ಅಳಸಿಂಗ ರಾರ್ಯನುದ್ದಾಮ ಕೃಪಾವೈಭವಕೆ' ಪಾತ್ರಳಾದ ಹೊನ್ನಮ್ಮ 'ಧರ್ಮದ ನೆನಹು ಮರೆಯದಂತೆ' ಹದಿಬದೆಯ ಧರ್ಮವನ್ನು 'ಮಹಾಕೃತಿ'ಯಾಗಿ ಹೇಳಿದೆನೆಂದು ಆಕೆ ನುಡಿದಿದ್ದಾಳೆ. ಆದರೆ ಈ 'ಕೃತಿ ಮಹಾಕೃತಿಯಲ್ಲ; ಸತ್ಕೃತಿ' ಎಂಬ ಅಭಿ

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ಪ್ರಾಯವನ್ನು ಶ್ರೇಷ್ಠವಿಮರ್ಶಕರು ನುಡಿದಿದ್ದಾರೆ. ಒಂದು ದೃಷ್ಟಿಯಿಂದ ಈ ಮಾತು ಸತ್ಯ. ಈ ಕೃತಿಯಲ್ಲಿ ಮಹಾ ಕಾವ್ಯದ ಮುಖ್ಯಲಕ್ಷಣವಾದ ಹದಿನೆಂಟು ಬಗೆಯ ವರ್ಣನೆ ಗಳಿಲ್ಲ. ಅಚ್ಚಗನ್ನಡನುಡಿಗಟ್ಟಿನಿಂದ, ಸಹಜವಾದ ಪ್ರಾಸ ಸಂಪತ್ತಿನಿಂದ, ಹೃದ್ಯವಾದ ಸಾಂಗತ್ಯದ ನಡಗೆಯಿಂದ, ಆರ್ಯಸಂಸ್ಕೃತಿಯನ್ನು ಎತ್ತಿಹಿಡಿಯುವ ಮಹಾಗ್ರಂಥಗಳನ್ನು ಜೀರ್ಣಿಸಿಕೊಂಡು ಅವುಗಳಿಂದ ಎತ್ತಿಕೊಂಡ ಭಾವಗಳಿಗೆ ತನ್ನ ಅನುಭವ ಮುದ್ರೆಯನ್ನೊತ್ತಿದ ಪ್ರಾಸಾದಿಕವಾಣಿಯಿಂದ ಕೂಡಿವ ಈ ಗ್ರಂಥ ಸತ್ಕೃತಿಯೆನ್ನುವುದು ಅಕ್ಷರಶಃ ಸತ್ಯ. ಗ್ರಂಥವಿಮರ್ಶೆಯ ಅವಸರದಲ್ಲಿ ಈಗ ಕನ್ನಡವಿಮರ್ಶೆಯ ಲೋಕದಲ್ಲಿ ಮಹಾಕವಿ, ಮಹಾಕೃತಿ ಎಂಬ ಪದಗಳ ಬಳಕೆ ವಿವೇಚನೆಯಿಲ್ಲದೆ ಉಪಯುಕ್ತವಾಗುತ್ತಿದೆ. ಈ ಪದಗಳಿಗೆ ವಿದ್ವಾಂಸರಿಂದ ಖಚಿತವಾದ ಅರ್ಥ ಇನ್ನೂ ನಿರ್ಣಯವಾಗ ಬೇಕಾಗಿದೆ. ಹೊನ್ನಮ್ಮನ ಕಾವ್ಯದ ವಿಷಯದಲ್ಲಿ ಸದ್ಯಕ್ಕೆ ಇಷ್ಟನ್ನು ಹೇಳಬಹುದು ಧೈರ್ಯಮಾಡಿ. ಅಶ್ಲೀಲತೆಯಿಂದ ಮನಸ್ಸನ್ನು ದೂರವಾಗಿಸಿ, ಮನಸ್ಸಿನಲ್ಲಿ ಘನವಾದ ಭಾವನೆ ಗಳನ್ನು ಮೂಡಿಸಿ, ಮನುಷ್ಯನಲ್ಲಿರುವ ದೇವಾಂಶವನ್ನು ಹೊರ ಹೊಮ್ಮುವಂತೆ ಅರಳುವಂತೆ ಮಾಡುವ ಕೃತಿ ಮಹಾಕೃತಿ ಯೆಂಬ ಅರ್ಥವನ್ನು ಸದ್ಯಕ್ಕೆ ಇಟ್ಟುಕೊಂಡರೆ, ಅಷ್ಟರಮಟ್ಟಿಗೆ ಹೊನ್ನಮ್ಮನ ಕಾವ್ಯ ಮಹಾಕೃತಿ.

ಕನ್ನಡ ಸಾಹಿತ್ಯದಲ್ಲಿ ಹೊನ್ನಮ್ಮನು ಮರೆಯಲಾಗದ ವ್ಯಕ್ತಿ; ಅವಳ ಕಾವ್ಯ ಸುಲಭವಾಗಿ ಮರೆಯಲಾಗದ ಕೃತಿ.

JNANA SIMHASAN JNANAMANDIR
LIBRARY.
Jangamwadi Math, VARANASI,
Acc. No. 1666

CC0. In Public Domain. Jangamwadi Math Collection. Varanasi

Digitization by eGangotri and Sarayu Trust. Funding by MoE-IKS

ಸಾಧನ ಸಾಹಿತ್ಯ

೧. ಹದಿಬದೆಯ ಧರ್ಮ—
ಎಂ. ಆರ್. ರಾಮಾನುಜಯ್ಯಂಗಾರ್ (ಸಂ.)

೨. ಹದಿಬದೆಯ ಧರ್ಮ—ಸಂಪಾದಕಿ. ಡಿ. ಚಂಪಾಬಾಯಿ, ಎಂ.ಎ. ಪೀಠಿಕೆ, ಟಿಪ್ಪಣಿ ಅರ್ಥಕೋಶಗಳೊಡನೆ. ಮೈಸೂರು ವಿಶ್ವವಿದ್ಯಾನಿಲಯದ ಪ್ರಕಟನೆ.

೩. ಕನ್ನಡ ಸಾಹಿತ್ಯ ಚರಿತ್ರೆ—ಡಾ. ರಂ. ಶ್ರೀ ಮುಗಳಿ, ಎಂ.ಎ., ಬಿ.ಟಿ., ಡಿ.ಲಿಟ್

೪. ಹದಿಬದೆಯಧರ್ಮ—ಮುಳಿಯ ತಿಮ್ಮಪ್ಪಯ್ಯ (ವಿಮರ್ಶೆ-ವಸ್ತುಕೋಶ. ಕ.ಸಾ.ಪ.೨೬ ಪುಟ ೮೫)

೫. ಸಂಚಿಯ ಹೊನ್ನಮ್ಮನ ಹದಿಬದೆಯಧರ್ಮ—
ಎಚ್. ಎಂ. ಶಂಕರನಾರಾಯಣರಾವ್, ಎಂ.ಎ. (ಸುಬೋಧ-ಮಾರ್ಚ್ ೧೯೩೬)

೬. ಹೊನ್ನಮ್ಮನ ಕಾವ್ಯ—ಹದಿಬದೆಯಧರ್ಮ—
ಎಸ್. ವಿನೋದಾಬಾಯಿ, ಎಂ.ಎ., ಕನ್ನಡನುಡಿ (೧೯೫೬)

DONATED BY
M. S. SIDDAPPA BROTHERS
Merchants, Manufacrurers & Bankers,
THYAGARAJA ROAD, MYSORE-4.
WO 220—MUPM—3000, 25-4-1959
SHREE JANGAMAVADI MUTT
BENARES CITY

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

೩೬. ಸಾರಜನಕದ ಮಹತ್ವ—ಎಚ್. ಸುಬ್ಬಾಜೋಯಿಸ್
೩೭. ಭಾಸ—ಡಾ॥ ಎಚ್. ಎಲ್. ಹರಿಯಪ್ಪ
೩೮. ಪಾಶ್ಚಾತ್ಯ ರಾಜಕೀಯ ತತ್ವಗಳು—ಎಂ. ಯಾಮುನಾಚಾರ್ಯ
೩೯. ಸರ್ವಜ್ಞ ಕವಿ—ಎ. ಆರ್. ಕೃಷ್ಣಶಾಸ್ತ್ರೀ
೪೦. ರಕ್ತ—ಡಿ. ಶಾಮಣ್ಣ
೪೧. ಇಂಗ್ಲಿಷ್ ಪ್ರಬಂಧಗಳು—ಎಸ್. ಮಂಜುನಾಥ್
೪೨. ಅಕ್ಕಮಹಾದೇವಿ—ಎಸ್. ವಿ. ಪರಮೇಶ್ವರಭಟ್ಟ
೪೩. ಗಣಿತಶಾಸ್ತ್ರದ ಸ್ವರೂಪ
—ಡಾ॥ ಸಿ. ಎನ್. ಶ್ರೀನಿವಾಸ ಅಯ್ಯಂಗಾರ್
೪೪. ಋಗ್ವೇದ—ಎಂ. ಎ. ಕೃಷ್ಣಸ್ವಾಮಿ
೪೫. ಕುಮಾರವ್ಯಾಸ ವಾಣಿ—ಎಸ್. ವಿ. ರಂಗಣ್ಣ
೪೬. ಆಳ್ವಾರುಗಳು—ಎಂ. ಯಾಮುನಾಚಾರ್ಯ
೪೭. ಹಿಂದು ಮುಸ್ಲಿಂ ಮೈತ್ರಿಯನ್ನು ಬೆಳೆಸಿದ ರಾಜರು
—ವಿ. ರಾಘವೇಂದ್ರರಾವ್
೪೮. ಸುಭಾಷಿತ ಸಂಗ್ರಹಗಳು—ಎಂ. ಪಿ. ಲಕ್ಷ್ಮೀನರಸಿಂಹಶಾಸ್ತ್ರೀ
೪೯. ಮಕ್ಕಳ ಭಾವಜೀವನ—ಡಾ॥ ಬಿ. ಕುಪ್ಪುಸ್ವಾಮಿನಾಯಿಡು
೫೦. ಸಹಕಾರ—ಎಸ್. ಗೋಪಾಲಸ್ವಾಮಿ
೫೧. ನಯಸೇನ—ಜಿ. ವೆಂಕಟಸುಬ್ಬಯ್ಯ
೫೨. ಕೌಟಿಲ್ಯ—ಡಾ॥ ಎಂ. ವಿ. ಕೃಷ್ಣರಾವ್
೫೩. ತೆಲುಗು ಚಾಟುಪದ್ಯಗಳು—ಕೆ. ವೆಂಕಟರಾಮಪ್ಪ
೫೪. ಮುನಿಸಿಪಾಲಿಟಿಗಳು—ಎಚ್. ಕೃಷ್ಣರಾವ್
೫೫. ಲಕ್ಷ್ಮೀಶ—ಎನ್. ಅನಂತರಂಗಾಚಾರ್
೫೬. ರುಚಿ—ಎಸ್. ವಿ. ರಂಗಣ್ಣ
೫೭. ಕೀಟಗಳು—ಡಿ. ಎಸ್. ವೀರಯ್ಯ
೫೮. ಅಲೆಗಳು—ಕೆ. ಶೇಷಾದ್ರಿ ಅಯ್ಯಂಗಾರ್
೫೯. ಮುದ್ದಣ—ಟಿ. ಎಸ್. ಶಾಮರಾವ್
೬೦. ಐವರು ಭೌತ ವೈಜ್ಞಾನಿಕರು—ಬಿ. ಎ. ಕೃಷ್ಣಸ್ವಾಮಿರಾವ್
೬೧. ಕೃತಕರೇಷ್ಮೆ—ಎಂ. ಷಡಕ್ಷರಸ್ವಾಮಿ
೬೨. ಚೀನರ ಇತಿಹಾಸ ಮತ್ತು ನಾಗರಿಕತೆ
—ಎಸ್. ವೆಂಕಟದೇಶಿಕಾಚಾರ್

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

೫೩. ಯುದ್ಧಕಾಲದ ಆರ್ಥಿಕ ಸಮಸ್ಯೆಗಳು
—ಎಸ್. ಲಕ್ಷ್ಮೀನರಸಿಂಹನ್

೫೪. ಆಹಾರ—ಜಿ. ಆರ್. ಲಕ್ಷ್ಮಣರಾವ್

೫೫. ಇಬ್ಸನ್ನಿನ ಕೆಲವು ನಾಟಕಗಳು—ಎಸ್. ಮಂಜುನಾಥ್

೫೬. ಶಬ್ದಪ್ರಪಂಚ—ಆರ್. ಎಲ್. ನರಸಿಂಹಯ್ಯ

೫೭. ಪ್ರಜಾಭಿಪ್ರಾಯ—ಟಿ.ಎಸ್. ರಾಜಗೋಪಾಲ ಅಯ್ಯಂಗಾರ್

೫೮. ಕಲ್ಲಿದ್ದಲು—ಕೆ. ಎಸ್. ಲಕ್ಷ್ಮಣರಾವ್

೫೯. ಜನಪದಮುಕ್ತಕಗಳು—ಎಚ್.ಎಂ. ಶಂಕರನಾರಾಯಣರಾವ್

೬೦. ಹಾಲು—ಕೆ. ಎಸ್. ಲಕ್ಷ್ಮಣರಾವ್

೬೧. ಭಾವಗೀತೆ—ಎಸ್. ವಿ. ಪರಮೇಶ್ವರಭಟ್ಟ

೬೨. ಭಾರತದಲ್ಲಿ ಪ್ರಜಾಪ್ರಭುತ್ವ
—ಟಿ. ಎಸ್. ರಾಜಗೋಪಾಲ ಅಯ್ಯಂಗಾರ್

೬೩. ಆರೋಗ್ಯಸಾಧನೆ—ಮೊಟಗಾನಹಳ್ಳಿ ಮಹದೇವಶಾಸ್ತ್ರೀ

೬೪-೬೫ ಆಧುನಿಕ ಭಾರತದಲ್ಲಿ ನೃತ್ಯಕಲೆ—ಯು. ಎಸ್. ಕೃಷ್ಣರಾವ್
ಮತ್ತು ಚಂದ್ರಭಾಗಾದೇವಿ

ಸಾದಾ ಪ್ರತಿ ೫೦ ನ. ಪೈಸೆ ; ಉತ್ತಮ ಪ್ರತಿ ೭೫ ನ. ಪೈಸೆ

೬೬. ಚುನಾವಣೆಗಳು—ಗ. ಸ. ಹಾಲಪ್ಪ

೬೭. ಮೀನಿನಿಂದ ಮಾನವನೆಡೆಗೆ—ಎಚ್. ಬಿ. ದೇವರಾಜಸರ್ಕಾರ್

೬೮. ಕ್ಷಯ—ಡಾ॥ ಎಸ್. ಟಿ. ಪುಟ್ಟಣ್ಣ

೬೯. ಶಿಲ್ಪಿಯ ಪಾತ್ರ—ಬಿ. ಎಲ್. ಸಿ. ರಾಜನ್

೭೦. ಪರತಂತ್ರ ಜೀವಿಗಳು ಮತ್ತು ಪರತಂತ್ರ ಜೀವನ
—ಎಚ್. ಬಿ. ದೇವರಾಜ ಸರ್ಕಾರ್

೭೧. ಮಾನವ ಹಕ್ಕುಗಳು—ಹೆಚ್. ಎಂ. ಸದಾಶಿವಯ್ಯ

೭೨. ವಿನೋದ ಗಣಿತ—ವಿ. ಕೆ. ದೊರೆಸ್ವಾಮಿ

೭೩. ಸಾಬೂನು—ಕೆ. ಎಸ್. ಲಕ್ಷ್ಮಣರಾವ್

೭೪. ಉಷ್ಣಯಂತ್ರಗಳ ಪರಿಚಯ—ಕೆ. ವಿ. ಸುಬ್ಬರಾಯ

೭೫. ಬಟ್ಟೆಗಳ ವೈಜ್ಞಾನಿಕ ಪರೀಕ್ಷೆ—ಶ್ರೀ ನಾಗಭೂಷಣ

ಸಾದಾ ಪ್ರತಿ ೨೫ ನ. ಪೈಸೆ ; ಉತ್ತಮ ಪ್ರತಿ ೩೭ ನ. ಪೈಸೆ

---

* ಈ ಪುಸ್ತಕ ಅಚ್ಚಿನಲ್ಲಿದೆ

CC0. In Public Domain. Jangamwadi Math Collection, Varanasi